Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| भाग—IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली मंगलवार मार्च—13 1984 | रुधिरोद्गारि 1905 (शक) | खण्ड—1 |
| No. 1 | New Delhi Tuesday, March 13, 1984 | Rudhirodgari-1905 (Saka) | Vol. 1 |
| ಸಂಖ್ಯೆ ೧ | ನವದೆಹಲಿ ಮಂಗಳವಾರ, ಮಾರ್ಚ್ ೧೩, ೧೯೮೪ | ರುಧಿರೋದ್ಗಾರಿ-೧೯೦೫ (ಶಕ) | ಸಂಪುಟ ೧ |


## MINISTRY OF LAW, JUSTICE & COMPANY AFFAIRS

### (Legislative Department)

New Delhi, September 16, 1983/Rudhirodgari 1905 (Sakha)

The translations in Kannada of the foloowing namely—(1) The wakf Act, 1954, (2) The Railway property (unlawful possession) Act, 1966 (3) The Telegraph wires (unlawful possession) Act, 1950 (4) The Disputed Elections (Prime minister and speaker) Act, 1977 (5) The Dock workers (Regulation of employment) Act, 1948 are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ,—(೧) ವಕ್ಫ್ ಅಧಿನಿಯಮ ೧೯೫೪ (೨) ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೬೬ (೩) ಟೆಲಿಗ್ರಾಫ್ ತಂತಿಗಳು (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೫೦ (೪) ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, ೧೯೭೭ (೫) ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಮಯಗಳು) ಅಧಿನಿಯಮ, ೧೯೪೮—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ವಕ್ಫ್ ಅಧಿನಿಯಮ, 1954

(1954ರ ಅಧಿನಿಯಮ ಸಂಖ್ಯೆ 29) [1954ರ ಮೇ 21]

[ಸೆಪ್ಟೆಂಬರ್ 1, 1983 ರಂದು ಜಾರಿಯಲ್ಲಿದ್ದಂತೆ]

ವಕ್ಫ್‌ಗಳ ಉತ್ತಮ ಆಡಳಿತಕ್ಕಾಗಿ ಮತ್ತು ಮೇಲ್ವಿಚಾರಣೆಗಾಗಿ ಉಪಬಂಧಿಸುವ ಅಧಿನಿಯಮ

ಭಾರತ ಗಣರಾಜ್ಯದ ಐದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:—

## ಅಧ್ಯಾಯ—I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು ವಕ್ಫ್ ಅಧಿನಿಯಮ, 1954 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯದಲ್ಲಿ, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಆ ರಾಜ್ಯಕ್ಕೆ ಸಂಬಂಧಿಸಿ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು:

ಪರಂತು, ಬಿಹಾರ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳ ಪೈಕಿ ಯಾವುದೇ ರಾಜ್ಯದ ಸಂಬಂಧದಲ್ಲಿ, ಸಂಬಂಧಪಟ್ಟ ರಾಜ್ಯಸರ್ಕಾರದ ಶಿಫಾರಸಿನ ಮೇಲೆ ಹೊರತು, ಅಂಥ ಯಾವ ಅಧಿಸೂಚನೆಯನ್ನೂ ಹೊರಡಿಸತಕ್ಕದ್ದಲ್ಲ:

ಮತ್ತೂ ಪರಂತು, ರಾಜ್ಯಗಳ ಪುನಾರಚನೆ ಅಧಿನಿಯಮ, 1956 (1956ರ 37)ರ ಮೂಲಕ ಮಾಡಲಾದ ರಾಜ್ಯ ಕ್ಷೇತ್ರಗಳ ಬದಲಾವಣೆಗಳ ಕಾರಣದಿಂದಾಗಿ, ಈ ಅಧಿನಿಯಮವು 1956ರ ನವೆಂಬರ್ 1ನೇ ದಿನಾಂಕದಿಂದ ರಾಜ್ಯದ ಒಂದು ಭಾಗಕೆ ಮಾತ್ರ ಅನ್ವಯವಾಗುವಲ್ಲಿ, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮವನ್ನು ಆ ರಾಜ್ಯದ ಉಳಿದ ಭಾಗದಲ್ಲಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ತರಬಹುದು.

2. ಅಧಿನಿಯಮದ ಅನ್ವಯ.—ಈ ಅಧಿನಿಯಮದ ಮೇರೆಗೆ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಅನಂತರ ರಚಿತವಾಗಿರುವ ಎಲ್ಲ ವಕ್ಫ್‌ಗಳಿಗೆ ಈ ಅಧಿನಿಯಮವು ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ, ದರ್ಗಾ ಖ್ವಾಜಾ ಸಾಹೇಬ್ ಅಧಿನಿಯಮ, 1955 (1955ರ 36) ಅನ್ವಯಿಸುವ ಅಜ್‌ಮೀರನಲ್ಲಿರುವ ದರ್ಗಾ ಖ್ವಾಜಾ ಸಾಹೇಬ್‌ಗೆ ಅನ್ವಯಿಸತಕ್ಕದ್ದಲ್ಲ.

3. ಪರಿಭಾಷೆಗಳು:—ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) "ಫಲಾನುಭವಿ" ಎಂದರೆ, ಯಾವ ವ್ಯಕ್ತಿಯ ಅಥವಾ ವಿಷಯ ವಸ್ತುವಿನ ಪ್ರಯೋಜನಕ್ಕಾಗಿ ವಕ್ಫ್ ರಚಿತವಾಗಿದೆಯೋ ಅಂಥ ವ್ಯಕ್ತಿ ಅಥವಾ ವಿಷಯ ವಸ್ತು ಮತ್ತು ಇದು ಧಾರ್ಮಿಕವಾದ, ಧರ್ಮ ಶ್ರದ್ಧೆಯ ಮತ್ತು ಧರ್ಮಾರ್ಥದ ಉದ್ದೇಶಗಳನ್ನು ಮತ್ತು ಮುಸ್ಲಿಂ ಕಾನೂನು ಅಂಗೀಕರಿಸಿದ ಸಾರ್ವಜನಿಕ ಉಪಯುಕ್ತತೆಯ ಇತರ ಯಾವುದೇ ವಿಷಯವಸ್ತುಗಳನ್ನು ಒಳಗೊಳ್ಳುತ್ತದೆ;

(ಖ) ''ಪ್ರಯೋಜನ" ಎಂಬುದು ಮುತವಲ್ಲಿಯು ತಾನು ಅಂಥ ಮುತವಲ್ಲಿಯಾಗಿರುವನೆಂಬ ಏಕಮಾತ್ರ ಕಾರಣದಿಂದ ಯಾವ ಪ್ರಯೋಜನವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರುವನೋ ಆ ಯಾವುದೇ ಪ್ರಯೋಜನವನ್ನು ಒಳಗೊಳ್ಳುವುದಿಲ್ಲ;

(ಗ) ''ಮಂಡಲಿ" ಎಂದರೆ, 9ನೇ ಪ್ರಕರಣದ (1)ನೇ ಉಪಪ್ರಕರಣದ, ಅಥವಾ ಸಂದರ್ಭಾನುಸಾರ, (1ಕ) ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ವಕ್ಫ್‌ಗಳ ಮಂಡಲಿ ;

(ಘ) ''ಕಮಿಷನರ್" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಿತನಾದ ವಕ್ಫ್‌ಗಳ ಕಮಿಷನರ್ ಮತ್ತು ಇದು ವಕ್ಫ್‌ಗಳ ಯಾವನೇ ಅಧಿಕ ಅಥವಾ ಸಹಾಯಕ ಕಮಿಷನರನನ್ನು ಒಳಗೊಳ್ಳುತ್ತದೆ,

(ಘಘ) ''ಪರಿಷತ್ತು" ಎಂದರೆ, 8ಕ ಪ್ರಕರಣದ ಮೇರೆಗೆ ಸ್ಥಾಪಿತವಾದ ಕೇಂದ್ರ ವಕ್ಫ್‌ಗಳ ಪರಿಷತ್ತು;

(ಙ) "ಸದಸ್ಯ'' ಎಂದರೆ, ಮಂಡಲಿಯ ಸದಸ್ಯ ಮತ್ತು ಇದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಚ) "ಮುತವಲ್ಲಿ" ಎಂದರೆ, ಮೌಖಿಕವಾಗಿ ಅಥವಾ ಯಾವ ವಿಲೇಖ ಅಥವಾ ಲಿಖಿತದ ಮೂಲಕ ವಕ್ಫ್‌ನ್ನು ರಚಿಸಲಾಗಿದೆಯೋ ಆ ಯಾವುದೇ ವಿಲೇಖದ ಅಥವಾ ಲಿಖಿತದ ಮೇರೆಗೆ ಆಥವಾ ಸಕ್ಷಮ ಪ್ರಾಧಿಕಾರದಿಂದ ವಕ್ಫ್‌ನ ಮುತವಲ್ಲಿಯಾಗಿ ನೇಮಿತನಾದ ಯಾವನೇ ವ್ಯಕ್ತಿ ಮತ್ತು ಇದು, ಮುತವಲ್ಲಿಯ ಕರ್ತವ್ಯಗಳನ್ನು ನಿರ್ವಹಿಸಲು ಮುತವಲ್ಲಿಯಿಂದ ನೇಮಿತನಾದ ಯಾವನೇ ನಾಯಬ್ ಮುತವಲ್ಲಿಯನ್ನು, ಖಾದಿಮನನ್ನು, ಮುಜಾವರನನ್ನು, ಸಜ್ಜಾದ್‌ನಷೀನನನ್ನು, ಅಮೀನ್‌ನನ್ನು ಅಥವಾ ಇತರವ್ಯಕ್ತಿಯನ್ನು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ವಕ್ಫ್ ಸ್ವತ್ತನ್ನು ತತ್ಕಾಲದಲ್ಲಿ, ಹಾಗೆ ವ್ಯವಸ್ಥಾಪನೆ ಮಾಡುತ್ತಿರುವ ಅಥವಾ ಅದರ ಆಡಳಿತವನ್ನು ನೋಡಿಕೊಳ್ಳುತ್ತಿರುವ ಯಾವನೇ ವ್ಯಕ್ತಿಯನ್ನು ಅಥವಾ ಸಮಿತಿಯನ್ನು ಒಳಗೊಳ್ಳುತ್ತದೆ:

(ಛ) ವಕ್ಫ್ ಸಂಬಂಧದಲ್ಲಿ "ನಿವ್ವಳ ವಾರ್ಷಿಕ ಆದಾಯ" ಎಂದರೆ, ಈ ಕೆಳಕಂಡವುಗಳನ್ನು ಮಾತ್ರ ಹೊರತುಪಡಿಸಿ ಒಂದು ವರ್ಷದಲ್ಲಿ ಎಲ್ಲ ಮೂಲಗಳಿಂದ ಬರುವ ಅದರ ಒಟ್ಟು ಆದಾಯ—

(i) ಸರ್ಕಾರಕ್ಕೆ ಅಥವಾ ಇತರ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಭೂಕಂದಾಯ, ಉಪಕರ, ಕರಗಳು ಮತ್ತು ತೆರಿಗೆಗಳು; ಮತ್ತು

(ii) ವಕ್ಫ್‌ನ ಮೂಲ ನಿಧಿಯ ಭಾಗವಾಗಿರತಕ್ಕದೆಂಬ ನಿರ್ದಿಷ್ಟವಾದ ನಿರ್ದೇಶದೊಂದಿಗೆ ಕೊಡಲಾದ ದೇಣಿಗೆಗಳು ಅಥವಾ ಒಪ್ಪಿಸಲಾದ ಕಾಣಿಕೆಗಳು;

ಪರಂತು ಅಂಥ ದಾನಗಳಿಂದ ಅಥವಾ ಕಾಣಿಕೆಗಳಿಂದ ಪ್ರಾಪ್ತವಾಗುವ ಬಡ್ಡಿ ಅಥವಾ ಆದಾಯ ಯಾವುದಾದರೂ ಇದ್ದರೆ, ಅದನ್ನು ಒಟ್ಟು ವಾರ್ಷಿಕ ಆದಾಯವನ್ನು ಲೆಕ್ಕ ಹಾಕುವಾಗ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದು;

(ಜ) "ವಕ್ಫ್‌ನಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿ" ಎಂದರೆ, ವಕ್ಫ್‌ನಿಂದ ಯಾವುದೇ ಆರ್ಥಿಕ ಅಥವಾ ಇತರ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳ ಯಾವನೇ ವ್ಯಕ್ತಿ ಮತ್ತು ಇದು—

(i) ಮಸೀದಿಯಲ್ಲಿ, ಈದ್‌ಗಾದಲ್ಲಿ, ಇಮಾಂಬಾಡಾದಲ್ಲಿ, ದರ್ಗಾದಲ್ಲಿ, ಖಾನ್‌ಗಾಹದಲ್ಲಿ, ಮಖ್‌ಬರಾದಲ್ಲಿ, ಕಬರ್‌ಸ್ತಾನದಲ್ಲಿ ಅಥವಾ ವಕ್ಫ್‌ಗೆ ಸಂಬಂಧಪಟ್ಟ ಇತರ ಯಾವುದೇ ಧಾರ್ಮಿಕ ಸಂಸ್ಥೆಯಲ್ಲಿ ಪೂಜೆ ಮಾಡಲು ಅಥವಾ ಯಾವುದೇ ಧಾರ್ಮಿಕ ಕರ್ಮವನ್ನು ಮಾಡಲು ಅಥವಾ ವಕ್ಫ್‌ಗೆ ಸಂಬಂಧಿಸಿದ ಯಾವುದೇ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಯಲ್ಲಿ ಭಾಗವಹಿಸಲು ಹಕ್ಕುಳ್ಳ ಯಾವನೇ ವ್ಯಕ್ತಿಯನ್ನು;

(ii) ವಾಕಿಫ್‌ನನ್ನು ಮತ್ತು ವಾಕಿಫ್‌ನ ಮುತವಲ್ಲಿಯ ಯಾವನೇ ವಂಶಜನನ್ನು ಒಳಗೊಳ್ಳುತ್ತದೆ.

(ಝ) "ನಿಯಮಿಸಲಾದುದು" ಎಂದರೆ, IIನೇ ಅಧ್ಯಾಯದಲ್ಲಿ ಹೊರತು, ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಮತ್ತು ಇದು ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಿದ ವಿನಿಯಮಗಳನ್ನು ಒಳಗೊಳ್ಳುತ್ತದೆ;

(ಞ) "ಷಿಯಾ ವಕ್ಫ್" ಎಂದರೆ, ಷಿಯಾ ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟ ವಕ್ಫ್;

(ಟ) "ಸುನ್ನಿ ವಕ್ಫ್" ಎಂದರೆ, ಸುನ್ನಿ ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟ ವಕ್ಫ್;

(ಠ) "ವಕ್ಫ್" ಎಂದರೆ, ಇಸ್ಲಾಂ ಧರ್ಮವನ್ನು ಆಚರಿಸುವ ವ್ಯಕ್ತಿಯು ಧರ್ಮ ಶ್ರದ್ಧೆಯದೆಂದು, ಧಾರ್ಮಿಕವಾದುದೆಂದು ಅಥವಾ ಧರ್ಮಾರ್ಥದ್ದೆಂದು ಮುಸ್ಲಿಂ ಕಾನೂನಿನಿಂದ ಮಾನ್ಯತೆ ಪಡೆದ ಯಾವುದೇ ಉದ್ದೇಶಕ್ಕಾಗಿ ಮಾಡಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ಖಾಯಂ ಸಮರ್ಪಣೆ, ಮತ್ತು ಇದು—

(i) ಬಳಕೆಯಿಂದ ಉಂಟಾಗುವ ವಕ್ಫ್‌ನ್ನು;

(ii) ಧರ್ಮ ಶ್ರದ್ಧೆಯದೆಂದು, ಧಾರ್ಮಿಕವಾದುದೆಂದು ಅಥವಾ ಧರ್ಮಾರ್ಥವಾದುದೆಂದು ಮುಸ್ಲಿಂ ಕಾನೂನಿನಿಂದ ಮಾನ್ಯತೆ ಪಡೆದ ಯಾವುದೇ ಉದ್ದೇಶಕ್ಕಾಗಿ ಕೊಟ್ಟ ಅನುದಾನಗಳನ್ನು (ಮಷರೂತ್-ಉಲ್-ಖಿದಾಮತ್‌ನ್ನು ಒಳಗೊಂಡು); ಮತ್ತು

(iii) ಧರ್ಮ ಶ್ರದ್ಧೆಯದೆಂದು, ಧಾರ್ಮಿಕವಾದುದೆಂದು ಅಥವಾ ಧರ್ಮಾರ್ಥ ವೆಂದು ಮುಸ್ಲಿಂ ಕಾನೂನಿನಿಂದ ಮಾನ್ಯತೆ ಪಡೆದ ಯಾವುದೇ ಉದ್ದೇಶಕ್ಕಾಗಿ ಸ್ವತ್ತನ್ನು ಎಷ್ಟರಮಟ್ಟಿಗೆ ಸಮರ್ಪಿಸಲಾಗಿದೆಯೋ ಅಷ್ಟರಮಟ್ಟಿಗೆ ವಕ್ಫ್ ಇಲಲ್ ಔಲಾದ್‌ನ್ನು—ಒಳಗೊಳ್ಳುತ್ತದೆ

ಮತ್ತು ವಾಕಿಫ್ ಎಂದರೆ, ಅಂತಹ ಸಮರ್ಪಣೆಯನ್ನು ಮಾಡುವ ಯಾವನೇ ವ್ಯಕ್ತಿ,

(ಡ) "ವಕ್ಫ್ ವಿಲೇಖ" ಎಂದರೆ, ಯಾವ ವಿಲೇಖದ ಅಥವಾ ಲಿಖಿತದ ಮೂಲಕ ವಕ್ಫ್‌ನ್ನು ರಚಿಸಲಾಗಿದೆಯೋ ಅಂಥ ಯಾವುದೇ ವಿಲೇಖ ಅಥವಾ ಲಿಖಿತ ಮತ್ತು ಇದು ಯಾವ ವಿಲೇಖದ ಅಥವಾ ಲಿಖಿತದ ಮೂಲಕ ಮೂಲ ಸಮರ್ಪಣೆಯ ಯಾವುವೇ ಷರತ್ತುಗಳನ್ನು ವ್ಯತ್ಯಾಸಗೊಳಿಸಲಾಗಿದೆಯೋ ಅಂಥ ಯಾವುದೇ ಸಿಂಧುವಾದ ತರುವಾಯದ ವಿಲೇಖವನ್ನು ಅಥವಾ ಲಿಖಿತವನ್ನು ಒಳಗೊಳ್ಳುತ್ತದೆ.

## ಅಧ್ಯಾಯ—II

## ವಕ್ಫ್‌ಗಳ ಸಮೀಕ್ಷೆ

4. ವಕ್ಫ್‌ಗಳ ಪ್ರಾರಂಭಿಕ ಸಮೀಕ್ಷೆ.—(1) ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಂದು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ವಕ್ಫ್‌ಗಳ ಸ್ವತ್ತುಗಳ ಸಮೀಕ್ಷೆಯನ್ನು ನಡೆಸುವ ಉದ್ದೇಶಕ್ಕಾಗಿ ರಾಜ್ಯದಲ್ಲಿ ಒಬ್ಬ ವಕ್ಫ್‌ಗಳ ಕಮೀಷನರನನ್ನು ಮತ್ತು ಅವಶ್ಯವಾಗಬಹುದಾದಷ್ಟು ಅಧಿಕ ಅಥವಾ ಸಹಾಯಕ ವಕ್ಫ್ ಕಮೀಷನರುಗಳನ್ನು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ನೇಮಿಸಬಹುದು.

(2) ಎಲ್ಲ ಅಧಿಕ ಮತ್ತು ಸಹಾಯಕ ವಕ್ಫ್ ಕಮೀಷನರುಗಳು, ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ವಕ್ಫ್‌ಗಳ ಕಮೀಷನರನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ಮತ್ತು ನಿಯಂತ್ರಣದಲ್ಲಿ ನೆರವೇರಿಸತಕ್ಕದು.

(3) ಕಮೀಷನರನು, ತಾನು ಆವಶ್ಯಕವೆಂದು ಪರ್ಯಾಲೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ಅನಂತರ, ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಂದು ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಸ್ತಿತ್ವದಲ್ಲಿ ಇರುವ ವಕ್ಫ್‌ಗಳ ಸಂಬಂಧದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದು ಎಂದರೆ:—

(ಕ) ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ, ಅದರ ಯಾವುದೇ ಭಾಗದಲ್ಲಿ ಇರುವ ಷಿಯಾ ವಕ್ಫ್‌ಗಳನ್ನು ಮತ್ತು ಸುನ್ನಿ ವಕ್ಫ್‌ಗಳನ್ನು ಪ್ರತ್ಯೇಕವಾಗಿ ತೋರಿಸುವ ವಕ್ಫ್‌ಗಳ ಸಂಖ್ಯೆ;

(ಖ) ಪ್ರತಿಯೊಂದು ವಕ್ಫ್‌ನ ಸ್ವರೂಪ ಮತ್ತು ಉದ್ದೇಶಗಳು;

(ಗ) ಪ್ರತಿಯೊಂದು ವಕ್ಫ್‌ಗೆ ಇರುವ ಸ್ವತ್ತಿನ ಒಟ್ಟು ಆದಾಯ;

(ಘ) ಅಂಥ ಸ್ವತ್ತಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಭೂ ಕಂದಾಯದ ಉಪಕರಗಳ, ಕರಗಳ ಮತ್ತು ತೆರಿಗೆಗಳ ಮೊಬಲಗು;

(ಙ) ಆದಾಯವನ್ನು ವಸೂಲು ಮಾಡುವುದಕ್ಕೆ ತಗುಲಿದ ವೆಚ್ಚಗಳು ಮತ್ತು ಪ್ರತಿಯೊಂದು ವಕ್ಫ್‌ನ ಮುತವಲ್ಲಿಯ ವೇತನ ಅಥವಾ ಇತರ ಪರಿಶ್ರಮ ಧನ, ಮತ್ತು

(ಚ) ಪ್ರತಿಯೊಂದು ಸಂಬಂಧದಲ್ಲಿ ವಕ್ಫ್‌ನ ನಿಯಮಿಸಬಹುದಾದಂಥ ಇತರ ವಿವರಗಳು.

(4) ಕಮೀಷನರನು, ಯಾವುದೇ ವಿಚಾರಣೆಯನ್ನು ಮಾಡುವಾಗ, ಕೆಳಕಂಡ ವಿಷಯಗಳ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದು, ಎಂದರೆ:

(ಕ) ಯಾವನೇ ಸಾಕ್ಷಿದಾರನನ್ನು ಸಮನು ಮಾಡುವುದು ಮತ್ತು ವಿಚಾರಣೆ ಮಾಡುವುದು;

(ಖ) ಯಾವುದೇ ದಸ್ತಾವೇಜನ್ನು ಬಹಿರಂಗಪಡಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಗ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ತರಿಸಿಕೊಳ್ಳುವುದು;

(ಘ) ಯಾವನೇ ಸಾಕ್ಷಿದಾರನ ಅಥವಾ ಯಾವುದೇ ಲೆಕ್ಕಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು;

(ಙ) ಯಾವುದೇ ಸ್ಥಳೀಯ ಪರಿಶೀಲನೆಯನು ಅಥವಾ ಸ್ಥಳೀಯ ತನಿಖೆಯನ್ನು ನಡೆಸುವುದು;

(ಚ) ನಿ[illegible]ಮಿಸಬಹುದಾದ ಇತರ ಯಾವುವೇ ವಿಷಯ.

(5) ಅಂಥ ಯಾವುದೇ ವಿಚಾರಣೆಯ ಕಾಲದಲ್ಲಿ, ಯಾವುದೇ ನಿರ್ದಿಷ್ಟ ವಕ್ಫು ಷಿಯಾ ವಕ್ಫೇ ಅಥವಾ ಸುನ್ನಿ ವಕ್ಫೇ ಎಂಬುದರ ಬಗ್ಗೆ ಯಾವುದೇ ವಿವಾದವು ಉದ್ಭವಿಸಿದರೆ ಮತ್ತು ಅದರ ಸ್ವರೂಪದ ಬಗ್ಗೆ ವಕ್ಫಿನ ವಿಲೇಖದಲ್ಲಿ ಸ್ಪಷ್ಟ ಸೂಚನೆಗಳಿದ್ದರೆ, ವಿವಾದ ವನ್ನು ಅಂಥ ವಿಲೇಖದ ಆಧಾರದ ಮೇಲೆ ತೀರ್ಮಾನಿಸತಕ್ಕದ್ದು.

5. ವಕ್ಫ್‌ಗಳ ಪಟ್ಟಿಯ ಪ್ರಕಟಣೆ.—(1) 4ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ವರದಿಯು ತಲುಪಿದ ಮೇಲೆ ಅದರ ಒಂದು ಪ್ರತಿಯನ್ನು ರಾಜ್ಯ ಸರ್ಕಾರವು ಮಂಡಲಿಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಿದ ವರದಿಯನ್ನು ಮಂಡಲಿಯು ಪರೀಕ್ಷಿಸತಕ್ಕದ್ದು ಮತ್ತು ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ, ವರದಿಯು ಸಂಬಂಧಿಸುವ ರಾಜ್ಯದ ಭಾಗದಲ್ಲಿ ಅಸ್ತಿತ್ವದಲ್ಲಿ ಇರುವ ವಕ್ಫ್‌ಗಳ ಪಟ್ಟಿಯನ್ನು ನಿಯಮಿಸಬಹುದಾದಂಥ ವಿವರ ಗಳೊಡನೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ಪ್ರಕಟಿಸತಕ್ಕದ್ದು.

6. ವಕ್ಫ್‌ಗಳ ಬಗೆಗಿನ ವಿವಾದಗಳು:—(1) 5ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಪ್ರಕಟಿಸಲಾದ ವಕ್ಫ್‌ಗಳ ಪಟ್ಟಿಯಲ್ಲಿ ವಕ್ ಸ್ವತ್ತೆಂದು ನಿರ್ದಿಷ್ಟಪಡಿಸಲಾದ ನಿರ್ದಿಷ್ಟ ಸ್ವತ್ತು, ವಕ್ಫ್ ಸ್ವತ್ತೇ ಅಥವಾ ಅಲ್ಲವೇ, ಅಥವಾ ಅಂಥ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ವಕ್ಫ್ ಷಿಯಾ ವಕ್ಫೇ ಅಥವಾ ಸುನ್ನಿ ವಕ್ಫೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಮಂಡಲಿಯು ಅಥವಾ ವಕ್ಫ್‌ನ ಮುತವಲ್ಲಿಯು ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ಆ ಪ್ರಶ್ನೆಯ ತೀರ್ಮಾನಕ್ಕಾಗಿ ದಾವೆಯನ್ನು ಹೂಡಬಹುದು ಮತ್ತು ಅಂಥ ವಿಷಯದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಕ್ಫ್‌ಗಳ ಪಟ್ಟಿಯ ಪ್ರಕಟಣೆಯ ದಿನಾಂಕದಿಂದ ಒಂದು ವರ್ಷವು ಮುಗಿದ ಅನಂತರ ಅಂಥ ಯಾವ ದಾವೆಯನ್ನೂ ಸಿವಿಲ್ ನ್ಯಾಯಾಲಯವು ಹಿಡಿಯತಕ್ಕದ್ದಲ್ಲ:

ಮತ್ತೂ ಪರಂತು, ರಾಜ್ಯದ ಯಾವುದೇ ಭಾಗಕ್ಕೆ ಸಂಬಂಧಿಸಿದ ಮತ್ತು ವಕ್ಫ್‌ಗಳ (ತಿದ್ದುಪಡಿ) ಅಧಿನಿಯಮ, 1969 ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಕಟಿತವಾದ ಅಥವಾ ಪ್ರಕಟಿತವಾಗಿದೆಯೆಂದು ತಾತ್ಪರ್ಯವಾಗುವ ವಕ್ಫ್‌ಗಳ ಪಟ್ಟಿಯ ಸಂದರ್ಭದಲ್ಲಿ, ಅಂಥ ಪ್ರಾರಂಭದ ಒಂದು ವರ್ಷದ ಅವಧಿಯೊಳಗೆ ಸಿವಿಲ್ ನ್ಯಾಯಾಲಯವು ಅಂಥ ದಾವೆಯನ್ನು ಹಿಡಿಯಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ವಕ್ಫ್‌ನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಯಾವ ವ್ಯವಹರಣೆ ಯಾವುದೇ ದಾವೆಯು ಅಥವಾ ಅಂಥ ದಾವೆಯ ಸಂಬಂಧದಲ್ಲಿ ಉದ್ಭವಿಸುವ ಯಾವುದೇ ಅಪೀಲು ಅಥವಾ ಇತರ ವ್ಯವಹರಣೆಯನ್ನು ಇತ್ಯರ್ಥದಲ್ಲಿದೆಯೆಂಬ ಕಾರಣ ಮಾತ್ರದಿಂದ, ತಡೆ ಹಿಡಿಯ ತಕ್ಕದ್ದಲ್ಲ.

(3) ಕಮಿಷನರನನ್ನು (1)ನೇ ಉಪಪ್ರಕರಣದ ಮೇರೆಗೆ ಯಾವುದೇ ದಾವೆಗೆ ಪಕ್ಷಕಾರನನ್ನಾಗಿ ಮಾಡತಕ್ಕದ್ದಲ್ಲ ಮತ್ತು ಈ ಅಧಿನಿಯಮ ವನ್ನು ಅಥವಾ ಅದರ ಮೇರೆಗೆ ಮಾಡಿದ ಯಾವುವೇ ನಿಯಮಗಳನ್ನು ಅನುಸರಿಸಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕೃತ್ಯದ ಸಂಬಂಧವಾಗಿ ಅವನ ವಿರುದ್ಧವಾಗಿ ಯಾವ ದಾವೆಯನ್ನೂ, ಪ್ರಾಸಿಕ್ಯೂಷನ್ ಅನ್ನೂ ಅಥವಾ ಇತರ ಕಾನೂನು ವ್ಯವಹರಣೆ ಯನ್ನೂ ಹೂಡತಕ್ಕದ್ದಲ್ಲ.

(4) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ವಕ್ಫ್‌ಗಳ ಪಟ್ಟಿಯು ಸಿವಿಲ್ ನ್ಯಾಯಾಲಯದ ತೀರ್ಮಾನವನ್ನನುಸರಿಸಿ, (1)ನೇ ಉಪಪ್ರಕರಣದ ಮೇರೆಗೆ ಅದನ್ನು ಮಾರ್ಪಾಟು ಮಾಡಿದ ಹೊರತು, ಅಂತಿಮವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು.

7. ಸಮೀಕ್ಷೆಯ ಖರ್ಚುಗಳ ವಸೂಲಿ.—ಈ ಅಧ್ಯಾಯದ ಮೇರೆಗಿನ ವಕ್ಫ್‌ಗಳ ಪಟ್ಟಿಯ ಅಥವಾ ಪಟ್ಟಿಗಳ ಪ್ರಕಟಣೆಯ ಖರ್ಚನು ಒಳಗೊಂಡಂತೆ, ಸಮೀಕ್ಷೆಯನ್ನು ಮಾಡಲು ತಗಲುವ ಒಟ್ಟು ಖರ್ಚನ್ನು, ವಕ್ಫ್‌ಗಳ ನಿವ್ವಳ ವಾರ್ಷಿಕ ಆದಾಯವು ಒಂದು ನೂರು ರೂಪಾಯಿಗಳನ್ನು ಮೀರುವಲ್ಲಿ ಅಂಥ ವಕ್ಫ್‌ಗಳ ಎಲ್ಲ ಮುತವಲ್ಲಿಗಳು, ಅಂಥ ವಕ್ಫ್‌ಗಳಿಗಾಗಿ ರಾಜ್ಯದಲ್ಲಿ ಬರುವ ನಿವ್ವಳ ವಾರ್ಷಿಕ ಆದಾಯದ ದಾಮಾಷಾ ಪ್ರಮಾಣ ದಲ್ಲಿ ವಹಿಸತಕ್ಕದ್ದು, ಮತ್ತು ಅಂಥ ದಾಮಾಷಾವನ್ನು ಕಮೀಷನರನು ನಿರ್ಧರಿಸತಕ್ಕದ್ದು.

(2) ಯಾವ ವಿಲೇಖದ ಅಥವಾ ಲಿಖಿತದ ಮೂಲಕ ವಕ್ಫ್‌ನ್ನು ರಚಿಸಲಾಯಿತೋ ಆ ವಿಲೇಖದಲ್ಲಿ ಅಥವಾ ಲಿಖಿತದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಮೇರೆಗೆ ತಾನು ಕೊಡಬೇಕಾಗಿರುವ ಯಾವುದೇ ಮೊಬಲಗನ್ನು ಯಾವನೇ ಮುತವಲ್ಲಿಯು ವಕ್ಫ್‌ನ ಆದಾಯದಿಂದ ಸಂದಾಯ ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಮುತವಲ್ಲಿಯು ಕೊಡಬೇಕಾಗಿರುವ ಯಾವುದೇ ಮೊಬಲಗನ್ನು, ರಾಜ್ಯ ಸರ್ಕಾರವು ಕೊಡುವ ಪ್ರಮಾಣಪತ್ರದ ಮೇಲೆ, ಭೂ ಕಂದಾಯದ ಬಾಕಿಯೆಂಬ ರೀತಿಯಲ್ಲಿಯೇ ವಕ್ಫ್‌ಗೆ ಇರುವ ಸ್ವತ್ತಿನಿಂದ ವಸೂಲು ಮಾಡಬಹುದು.

8. IIನೇ ಅಧ್ಯಾಯವು ಕೆಲವು ರಾಜ್ಯಗಳಿಗೆ ಅನ್ವಯಿಸತಕ್ಕದ್ದಲ್ಲ.—ಯಾವ ರಾಜ್ಯದಲ್ಲಿ ಅಸ್ತಿತ್ವದಲ್ಲಿ ಇರುವ ವಕ್ಫ್ ಸ್ವತ್ತುಗಳ ಸಮೀಕ್ಷೆ ಯನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮಾಡಲಾಗಿದೆಯೋ ಆ ಯಾವುದೇ ರಾಜ್ಯಕ್ಕೆ ಈ ಅಧ್ಯಾಯದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ—IIಕ

## ಕೇಂದ್ರ ವಕ್ಫ್ ಪರಿಷತ್ತು

8ಕ. ಕೇಂದ್ರ ವಕ್ಫ್ ಪರಿಷತ್ತಿನ ಸ್ಥಾಪನೆ ಮತ್ತು ರಚನೆ.—(1) ಮಂಡಲಿಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮತ್ತು ವಕ್ಫ್‌ಗಳ ಕ್ರಮಬದ್ಧವಾದ ಆಡಳಿತದ ಬಗ್ಗೆ ತನಗೆ ಸಲಹೆ ಕೊಡುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ, ಕೇಂದ್ರ ವಕ್ಫ್ ಪರಿಷತ್ತು ಎಂದು ಕರೆಯಲಾಗುವ ಪರಿಷತ್ತನ್ನು ಸ್ಥಾಪಿಸಬಹುದು.

(2) ಆ ಪರಿಷತ್ತು, ವಕ್ಫ್‌ಗಳ ಆಡಳಿತವನ್ನು ಹೊಂದಿರುವ ಕೇಂದ್ರ ಸಚಿವರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಕೇಂದ್ರ ಸರ್ಕಾರವು ನಿಯಮಿಸ ಬಹುದಾದ, ಇಪ್ಪತ್ತಕ್ಕೆ ಮೀರದ ಇತರ ಸದಸ್ಯರನ್ನೂ ಹೊಂದಿರತಕ್ಕದ್ದು.

(3) ಪರಿಷತ್ತಿನ ಸದಸ್ಯರ ಪದಾವಧಿಯು, ಅವರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯು ಮತ್ತು ಅವರೊಳಗೆ ಆಕಸ್ಮಿಕವಾಗಿ ಉಂಟಾಗುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿಯು ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

8ಖ. ಪರಿಷತ್ತಿನ ಹಣಕಾಸು.—(1) ಯಾವ ವಕ್ಫ್‌ಗಳ ಸಂಬಂಧದಲ್ಲಿ 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಂತಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ ಅಂಥ ವಕ್ಫ್‌ಗಳ ಒಟ್ಟು ನಿವ್ವಳ ವಾರ್ಷಿಕ ಆದಾಯದ ಶೇಕಡಾ ಒಂದಕ್ಕೆ ಸಮನಾದ ವಂತಿಗೆಯನ್ನು ಪ್ರತಿಯೊಂದು ಮಂಡಲಿಯೂ ತನ್ನ ವಕ್ಫ್ ನಿಧಿಯಿಂದ ಪ್ರತಿ ವರ್ಷ ಪರಿಷತ್ತಿಗೆ ಸಂದಾಯ ಮಾಡತಕ್ಕದ್ದು:

ಪರಂತು, 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತನಗೆ ಸಂದಾಯವಾಗಬೇಕಾದ ಎಲ್ಲ ವಂತಿಗೆಯನ್ನು ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆಯಾವುದೇ ನಿರ್ದಿಷ್ಟ ವಕ್ಫ್‌ನ ಸಂಬಂಧದಲ್ಲಿ ಮಂಡಲಿಯು ಮಾಫಿ ಮಾಡಿದ್ದಲ್ಲಿ, ಈ ಪ್ರಕರಣದ ಮೇರೆಗೆ ಪರಿಷತ್ತಿಗೆ ಸಂದಾಯವಾಗಬೇಕಾದ ವಂತಿಗೆಯನ್ನು ಲೆಕ್ಕ ಮಾಡುವುದಕ್ಕಾಗಿ, ಯಾವ ವಕ್ಫ್‌ನ ಸಂಬಂಧದಲ್ಲಿ ಅಂಥ ಮಾಫಿಯನ್ನು ಮಂಜೂರು ಮಾಡಲಾಗಿದೆಯೋ ಅಂಥ ವಕ್ಫ್‌ನ ನಿವ್ವಳ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಪರಿಷತ್ತು ಸ್ವೀಕರಿಸಿದ ಎಲ್ಲ ಹಣವು ಮತ್ತು ದೇಣಿಗೆಯಾಗಿ, ಉಪಕಾರ ಧನವಾಗಿ ಮತ್ತು ಅನುದಾನವಾಗಿ ಅದು ಸ್ವೀಕರಿಸಿದ ಇತರ ಎಲ್ಲ ಹಣವು ಕೇಂದ್ರ ವಕ್ಫ್ ನಿಧಿ ಎಂದು ಕರೆಯಲಾಗುವ ನಿಧಿಯಾಗತಕ್ಕದ್ದು.

(3) ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ಕೇಂದ್ರ ವಕ್ಫ್ ನಿಧಿಯು ಪರಿಷತ್ತಿನ ನಿಯಂತ್ರಣದಲ್ಲಿರತಕ್ಕದ್ದು ಮತ್ತು ಪರಿಷತ್ತು ಸೂಕ್ತವೆಂದು ಭಾವಿಸಬಹುದಾದಂಥ ಉದ್ದೇಶಗಳಿಗೆ ಅದನ್ನು ವಿನಿಯೋಗಿಸಬಹುದು.

8ಗ. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.—(1) ಕೇಂದ್ರ ಸರ್ಕಾರವುರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲೆಕ್ಕದ ಪುಸ್ತಕಗಳನ್ನು ಮತ್ತು ತನ್ನ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಇತರ ಪುಸ್ತಕಗಳನ್ನು ಇಟ್ಟುಕೊಂಡು ಬರುವಂತೆ ಪರಿಷತ್ತು ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಲೆಕ್ಕಪರಿಶೋಧಕನು, ಪರಿಷತ್ತಿನ ಲೆಕ್ಕಪತ್ರಗಳನ್ನು ಪ್ರತಿವರ್ಷ ಪರಿಶೋಧಿಸತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು.

(3) ಲೆಕ್ಕಪರಿಶೋಧನೆಯ ಖರ್ಚುಗಳನ್ನು ಕೇಂದ್ರ ವಕ್ಫ್ ನಿಧಿಯಿಂದ ಸಂದಾಯಮಾಡತಕ್ಕದ್ದು.

8ಘ. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರಕ್ಕಿರುವ ಅಧಿಕಾರ.—(1) ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು; ಎಂದರೆ:—

(ಕ) ಪರಿಷತ್ತಿನ ಸದಸ್ಯರ ಪದಾವಧಿ, ಅವರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅವರೊಳಗೆ ಆಕಸ್ಮಿಕವಾಗಿ ಉಂಟಾಗುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಖ) ಕೇಂದ್ರ ವಕ್ಫ್ ನಿಧಿಯ ಮೇಲೆ ನಿಯಂತ್ರಣ ಮತ್ತು ಅದರ ವಿನಿಯೋಗ ;

(ಗ) ಪರಿಷತ್ತಿನ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರಬೇಕಾದ ನಮೂನೆ ಮತ್ತು ರೀತಿ.

(3) ಈ ಅಧ್ಯಾಯದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದು ರಚಿತವಾದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

## ಅಧ್ಯಾಯ—III

### ಮಂಡಲಿಗಳ ಸ್ಥಾಪನೆ ಮತ್ತು ಅವುಗಳ ಪ್ರಕಾರ್ಯಗಳು

9. ನಿಗಮನ:—(1) ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಬಗ್ಗೆ ಗೊತ್ತು ಮಾಡಬಹುದಾದಂಥ ದಿನಾಂಕದಿಂದ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನಲ್ಲಿ ವಕ್ಫ್‌ಗಳ ಮಂಡಲಿಯು ಸ್ಥಾಪಿತವಾಗತಕ್ಕದ್ದು.

(1ಕ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ರಾಜ್ಯದಲ್ಲಿನ "ಷಿಯಾ'' ವಕ್ಫ್‌ಗಳು ಆ ರಾಜ್ಯದಲ್ಲಿರುವ ಎಲ್ಲಾ ವಕ್ಫ್‌ಗಳ ಶೇಕಡ ಹದಿನೈದಕ್ಕಿಂತಹೆಚ್ಚಿನ ಸಂಖ್ಯೆಯಲ್ಲಿ ಇದ್ದರೆ, ಅಥವಾ ರಾಜ್ಯದಲ್ಲಿರುವ ಷಿಯಾ ವಕ್ಫ್‌ಗಳ ಸ್ವತ್ತುಗಳ ಆದಾಯವು ರಾಜ್ಯದಲ್ಲಿರುವ ಎಲ್ಲ ವಕ್ಫ್‌ಗಳ ಸ್ವತ್ತುಗಳ ಒಟ್ಟು ಆದಾಯದ ಶೇಕಡ ಹದಿನೈದಕ್ಕಿಂತ ಹೆಚ್ಚಾಗಿದ್ದರೆ, ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರುಗಳಲ್ಲಿ ಸುನ್ನಿ ವಕ್ಫ್‌ಗಳಿಗಾಗಿ ಮತ್ತು ಷಿಯಾ ವಕ್ಫ್‌ಗಳಿಗಾಗಿ ಪ್ರತಿಯೊಂದಕ್ಕೂ ವಕ್ಫ್‌ಗಳ ಒಂದು ಮಂಡಲಿಯನ್ನು ಸ್ಥಾಪಿಸಬಹುದು ಮತ್ತು ಅಂಥ ಸಂದರ್ಭದಲ್ಲಿ, ಈ ಅಧಿನಿಯಮದ ಉಪಬಂಧಗಳು ಅವುಗಳನ್ನು ರಾಜ್ಯಕ್ಕೆ ಅನ್ವಯಿಸುವಾಗ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ತಿದ್ದುಪಡಿಗಳನ್ನು ಮಾಡಿದರೆ ಹೇಗೋ ಹಾಗೆ ಪರಿಣಾಮಕಾರಿಯಾಗತಕ್ಕದ್ದು.

(2) ಮಂಡಲಿಯು, ನಿರಂತರ ಉತ್ತರಾಧಿಕಾರವನ್ನು ಹಾಗು ಸಾಮಾನ್ಯ ಮೊಹರನ್ನು ಹೊಂದಿರುವ ಮತ್ತು ಸ್ವತ್ತನ್ನು ಅರ್ಜಿಸಲು ಹಾಗು ಇಟ್ಟುಕೊಳ್ಳಲು ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗು ನಿರ್ಬಂಧಗಳಿಗೆ ಒಳಪಟ್ಟು ಅಂಥ ಯಾವುದೇ ಸ್ವತ್ತನ್ನು ವರ್ಗಾಯಿಸಲು ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವಾಗಿರ ತಕ್ಕದ್ದು ಮತ್ತು ಸದರಿ ಹೆಸರಿನಿಂದ ಅದು ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಒಳಗಾಗತಕ್ಕದ್ದು.

10. ಮಂಡಲಿಯ ರಚನೆ.—(1) ಮಂಡಲಿಯು —

(ಕ) ರಾಜ್ಯದ ಮತ್ತು ದೆಹಲಿಯ ಸಂಘ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಹನ್ನೊಂದು ಮಂದಿ ಸದಸ್ಯರನ್ನು; ಮತ್ತು

(ಖ) ಇತರ ಯಾವುದೇ ಸಂಘ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ, ಐದು ಮಂದಿ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಮಂಡಲಿಗೆ ಒಬ್ಬ ಅಧ್ಯಕ್ಷನು ಇರತಕ್ಕದ್ದು ಮತ್ತು ಅವನನ್ನು ಸದಸ್ಯರು ತಮ್ಮೊಳಗಿನಿಂದ ಚುನಾಯಿಸತಕ್ಕದ್ದು.

11. ಸದಸ್ಯರ ನೇಮಕ.—ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಕೆಳಕಂಡ ವ್ಯಕ್ತಿಗಳ ಪ್ರವರ್ಗಗಳ ಪೈಕಿ, ಯಾವುದೇ ಒಂದು ಅಥವಾ ಹೆಚ್ಚು ಪ್ರವರ್ಗಗಳಿಂದ ಮಂಡಲಿಯ ಸದಸ್ಯರನ್ನು ನೇಮಿಸತಕ್ಕದ್ದು, ಎಂದರೆ:—

(ಕ) ರಾಜ್ಯ ವಿಧಾನ ಮಂಡಲದ ಸದಸ್ಯರು ಮತ್ತು ರಾಜ್ಯವನ್ನು ಪ್ರತಿನಿಧಿಸುವ ಸಂಸತ್ತಿನ ಸದಸ್ಯರು;

(ಖ) ಮುಸ್ಲಿಂ ಕಾನೂನು ತಿಳಿವಳಿಕೆ ಇರುವ ಮತ್ತು ರಾಜ್ಯದ ಜಮಾಯಿತ್-ಅಲ್-ಉಲಾಮಾ-ಇ-ಹಿಂದ್‌ನಂಥ ಸಂಘಗಳನ್ನು ಪ್ರತಿನಿಧಿಸುವ (ಅಂಥ ವ್ಯಕ್ತಿಗಳು ಹನಫಿಗಳಾಗಿರಲಿ, ಅಹಲೇಹದಿಗಳಾಗಿರಲಿ, ಅಥವಾ ಷೆಫಾಯಿಗಳಾಗಿರಲಿ) ಅಥವಾ ರಾಜ್ಯ ಷಿಯಾ ಸಮ್ಮೇಲನವನ್ನು ಪ್ರತಿನಿಧಿಸುವ ವ್ಯಕ್ತಿಗಳು;

(ಗ) ಆಡಳಿತದ, ಹಣಕಾಸಿನ ಅಥವಾ ಕಾನೂನಿನ ತಿಳಿವಳಿಕೆ ಇರುವ ವ್ಯಕ್ತಿಗಳು ;

(ಘ) ರಾಜ್ಯದೊಳಗೆ ಇರುವ ವಕ್ಫ್‌ಗಳ ಮುತವಲ್ಲಿಗಳು:

ಪರಂತು, ಯಾವ ಸಂದರ್ಭದಲ್ಲಿಯೂ ಒಬ್ಬನಿಗಿಂತ ಹೆಚ್ಚು ಮುತವಲ್ಲಿಗಳನ್ನು ಮಂಡಲಿಗೆ ನೇಮಿಸತಕ್ಕದ್ದಲ್ಲ:

ಮತ್ತೂ ಪರಂತು, ಮಂಡಲಿಯಲ್ಲಿನ ಸುನ್ನಿ ಸದಸ್ಯರ ಅಥವಾ ಷಿಯಾ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವಾಗ, ಮಂಡಲಿಯು ಆಡಳಿತವನ್ನು ನಡೆಸಬೇಕಾದ ಸುನ್ನಿ ವಕ್ಫ್‌ಗಳ ಮತ್ತು ಷಿಯಾ ವಕ್ಫ್‌ಗಳ ಸಂಖ್ಯೆಯನ್ನು ಮತ್ತು ಮೌಲ್ಯವನ್ನು ರಾಜ್ಯಸರ್ಕಾರವು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

12. ಪದಾವಧಿ:—ಮಂಡಲಿಯ ಸದಸ್ಯರು ಐದು ವರ್ಷಗಳ ವರೆಗೆ ಆ ಪದದಲ್ಲಿ ಇರತಕ್ಕದ್ದು:

ಪರಂತು, ತನ್ನ ಪದಾವಧಿಯು ಮುಕ್ತಾಯವಾದಾಗ್ಯೂ, ತನ್ನ ಉತ್ತರಾಧಿಕಾರಿಯ ನೇಮಕವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿತವಾಗುವ ವರೆಗೆ ಸದಸ್ಯನು ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

13. ಮಂಡಲಿಯ ಸದಸ್ಯನಾಗಿ ನೇಮಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಇರುವ ಅನರ್ಹತೆಗಳು.—ಒಬ್ಬ ವ್ಯಕ್ತಿಯು—

(ಕ) ಅವನು ಮುಸ್ಲಿಮನಾಗಿರದಿದ್ದರೆ ಮತ್ತು ಇಪ್ಪತ್ತೊಂದು ವರ್ಷಗಳಿಗಿಂತ ಕಡಮೆ ವಯಸ್ಸಿನವನಾಗಿದ್ದರೆ;

(ಖ) ಅವನು ಅಸ್ವಸ್ಥಚಿತ್ತ ವ್ಯಕ್ತಿಯೆಂದು ಕಂಡು ಬಂದರೆ;

(ಗ) ಅವನು ಅವಿಮೋಚಿತ ದಿವಾಳಿಯಾಗಿದ್ದರೆ;

(ಘ) ಅವನು ನೈತಿಕ ಅಧಃಪತನದಿಂದ ಕೂಡಿದ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಙ) ಅವನನ್ನು ಹಿಂದೆ ಯಾವುದೇ ಸಂದರ್ಭದಲ್ಲಿ ಸದಸ್ಯನ ಪದದಿಂದ ತೆಗೆದುಹಾಕಲಾಗಿದ್ದರೆ ಅಥವಾ ದುರ್ವ್ಯವಸ್ಥೆಗಾಗಿ ಅಥವಾ ಭ್ರಷ್ಟಾಚಾರಕ್ಕಾಗಿ ಯಾವುದೇ ನಂಬಿಕೆಯ ಸ್ಥಾನದಿಂದ ಸಕ್ಷಮ ನ್ಯಾಯಾಲಯದ ಆದೇಶದ ಮೂಲಕ ತೆಗೆದುಹಾಕಿದ್ದರೆ ;

—ಮಂಡಲಿಯ ಸದಸ್ಯನಾಗಿ ನೇಮಿತನಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅನರ್ಹನಾಗತಕ್ಕದ್ದು.

14. ಮಂಡಲಿಯ ಸಭೆಗಳು.—(1) ಮಂಡಲಿಯು, ತನ್ನ ವ್ಯವಹಾರವನ್ನು ನಡೆಸುವುದಕ್ಕಾಗಿ ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಸದಸ್ಯರು ತಮ್ಮೊಳಗಿಂದ ಆರಿಸಿದ ಯಾವನೇ ಸದಸ್ಯನು ಮಂಡಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಸದಸ್ಯರ ಬಹುಮತಗಳಿಂದ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ಇತರ ಯಾವನೇ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

15. ಮಂಡಲಿಯ ಪ್ರಕಾರ್ಯಗಳು.—(1) ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ರಾಜ್ಯದಲ್ಲಿರುವ ಎಲ್ಲ ವಕ್ಫ್‌ಗಳ ಸಾಮಾನ್ಯ ಅಧೀಕ್ಷಣೆಯು ಆ ರಾಜ್ಯಕ್ಕಾಗಿ ಸ್ಥಾಪಿತವಾಗಿರುವ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು, ಮತ್ತು ಮಂಡಲಿಯ ಅಧೀಕ್ಷಣೆಯಲ್ಲಿರುವ ವಕ್ಫ್‌ಗಳನ್ನು ಯುಕ್ತವಾಗಿ ನಡೆಸಲಾಗುತ್ತಿದೆಯೇ, ನಿಯಂತ್ರಿಸಲಾಗುತ್ತಿದೆಯೇ ಮತ್ತು ಅವುಗಳ ಆಡಳಿತವನ್ನು ನಡೆಸಲಾಗುತ್ತಿದೆಯೇ ಎಂಬುದನ್ನು ಮತ್ತು ಅಂಥ ವಕ್ಫ್‌ಗಳನ್ನು ಯಾವ ಉದ್ದೇಶಗಳಿಗಾಗಿ ಮತ್ತು ಆಶಯಗಳಿಗಾಗಿ ರಚಿಸಲಾಯಿತೋ ಅಥವಾ ಸಂಕಲ್ಪಿಸಲಾಯಿತೋ ಅಂಥ ಉದ್ದೇಶಗಳಿಗೆ ಮತ್ತು ಆಶಯಗಳಿಗೆ ಅದರ ವರಮಾನವನ್ನು ಸೂಕ್ತವಾಗಿ ವಿನಿಯೋಗಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು:

ಪರಂತು, ಯಾವುದೇ ವಕ್ಫ್‌ನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ವಾಕಿಫ್‌ನ ನಿರ್ದೇಶಗಳಿಗೆ, ವಕ್ಫ್‌ನ ಉದ್ದೇಶಗಳಿಗೆ ಮತ್ತು ಮುಸ್ಲಿಂ ಕಾನೂನಿನಿಂದ ಅಂಗೀಕೃತವಾದ ವಕ್ಫ್‌ನ ಯಾವುದೇ ಆಚರಣೆಗೆ ಅಥವಾ ರೂಢಿಗೆ ಅನುಗುಣವಾಗಿ ಮಂಡಲಿಯು ಕಾರ್ಯವನ್ನು ನಿರ್ವಹಿಸತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧೆ ಬಾರದಂತೆ, ಮಂಡಲಿಯ ಪ್ರಕಾರ್ಯಗಳು ಈ ಕೆಳಕಂಡವುಗಳಾಗಿರತಕ್ಕದ್ದು—

(ಕ) ಪ್ರತಿಯೊಂದು ವಕ್ಫ್‌ನ ಮೂಲಕ್ಕೆ, ಆದಾಯಕ್ಕೆ, ಉದ್ದೇಶಕ್ಕೆ ಮತ್ತು ಫಲಾನುಭವಿಗಳಿಗೆ ಸಂಬಂಧಪಟ್ಟ ಮಾಹಿತಿಯನ್ನೊಳಗೊಂಡ ದಾಖಲೆಯನ್ನು ಇಟ್ಟುಕೊಂಡು ಬರುವುದು;

(ಖ) ವಕ್ಫ್‌ಗಳ ಆದಾಯವನ್ನು ಮತ್ತು ಇತರ ಸ್ವತ್ತನ್ನು, ಅಂಥ ವಕ್ಫ್‌ಗಳನ್ನು ಯಾವ ಉದ್ದೇಶಗಳಿಗಾಗಿ ಮತ್ತು ಆಶಯಗಳಿಗಾಗಿ ರಚಿಸಲಾಯಿತೋ ಅಥವಾ ಸಂಕಲ್ಪಿಸಲಾಯಿತೋ ಅವುಗಳಿಗೆ ವಿನಿಯೋಗಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(ಗ) ವಕ್ಫ್‌ಗಳ ಆಡಳಿತದ ಬಗ್ಗೆ ನಿರ್ದೇಶನಗಳನ್ನು ಕೊಡುವುದು;

(ಘ) ವಕ್ಫ್‌ನ ವ್ಯವಸ್ಥಾಪನಾ ಯೋಜನೆಗಳನ್ನು ನಿರ್ಧರಿಸುವುದು:

ಪರಂತು, ಬಾಧಿತರಾದ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಡದೆ ಅಂಥ ಯಾವ ನಿರ್ಧಾರವನ್ನೂ ಮಾಡತಕ್ಕದ್ದಲ್ಲ;

(ಙ) (i) ವಕ್ಫ್‌ನ ಹೆಚ್ಚುವರಿ ಆದಾಯವನ್ನು ವಕ್ಫ್‌ನ ಉದ್ದೇಶಗಳಿಗೆ ಸುಸಂಗತವಾಗಿ ಉಪಯೋಗಿಸುವಂತೆ ;

(ii) ಯಾವ ವಕ್ಫ್‌ನ ಉದ್ದೇಶಗಳು ಯಾವುದೇ ಬರಹ ರೂಪದ ಲಿಖಿತದಿಂದ ಸ್ಪಷ್ಟವಾಗಿಲ್ಲವೋ ಅಂಥ ವಕ್ಫ್‌ನ ಆದಾಯವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕದ್ದೆಂಬುದನ್ನು;

(iii) ವಕ್ಫಿನ ಯಾವುದೇ ಉದ್ದೇಶವು ಅಸ್ತಿತ್ವದಲ್ಲಿರುವುದು ಮುಕ್ತಾಯ ವಾಗಿರುವ ಅಥವಾ ಅದನ್ನು ಸಾಧಿಸಲು ಅಸಾಧ್ಯವಾಗಿರುವ ಯಾವುದೇ ಸಂದರ್ಭದಲ್ಲಿ, ಆ ಉದ್ದೇಶಕ್ಕೆ ಹಿಂದೆ ವಿನಿಯೋಗಿಸಲಾಗುತ್ತಿದ್ದಷ್ಟೇ ಪ್ರಮಾಣದ ವಕ್ಫಿನ ಆದಾಯವನ್ನು ಮೂಲ ಉದೇಶದ ತರಹದ ಅಥವಾ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅದೇ ತರಹದ ಇತರ ಯಾವುದೇ ಉದ್ದೇಶಕ್ಕೆ ಬಳಸುವಂತೆ;

——ನಿರ್ದೇಶಿಸುವುದು:

ಪರಂತು, ಬಾಧಿತರಾದ ಪಕ್ಷಕಾರರಿಗೆ ತಮ್ಮ ಅಹವಾಲಗಳನ್ನು ಹೇಳಿಕೊಳ್ಳಲು ಅವಕಾಶವನು ಕೊಡದೆ ಈ ಖಂಡದ ಮೇರೆಗೆ ಯಾವ ನಿರ್ದೇಶ ವನ್ನೂ ಕೊಡತಕ್ಕದ್ದಲ್ಲ.

ವಿವರಣೆ.—ಈ ಖಂಡದ ಉದ್ದೇಶಗಳಿಗಾಗಿ, ಮಂಡಲಿಯ ಅಧಿಕಾರಿಗಳನ್ನು,

(i) ಸುನ್ನಿ ವಕ್ಫಿನ ಸಂಬಂಧದಲ್ಲಿ, ಮಂಡಲಿಯ ಸುನಿ ಸದಸ್ಯರು ಮಾತ್ರ, ಮತ್ತು

(ii) ಷಿಯಾ ವಕ್ಫಿನ ಸಂಬಂಧದಲ್ಲಿ ಮಂಡಲಿಯ ಷಿಯಾ ಸದಸ್ಯರು ಮಾತ್ರ

—ಚಲಾಯಿಸತಕ್ಕದು:

ಪರಂತು, ಮಂಡಲಿಯ ಸುನ್ನಿ ಅಥವಾ ಷಿಯಾ ಸದಸ್ಯರ ಸಂಖ್ಯೆಯನ್ನು ಮತ್ತು ಇತರ ಸಂದರ್ಭಗಳನ್ನು ಗಮನಿಸಿ ಮಂಡಲಿಯ ಅಧಿಕಾರಗಳನ್ನು ಅಂಥ ಸದಸ್ಯರು ಮಾತ್ರವೇ ಚಲಾಯಿಸತಕ್ಕದಲ್ಲವೆಂದು ಮಂಡಲಿಗೆ ಕಂಡು ಬಂದಲ್ಲಿ, ಈ ಖಂಡದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ತಾನು ಸೂಕ್ತವೆಂದು ಆಲೋಚಿಸುವಂಥ, ಸಂದರ್ಭಾನುಸಾರ, ಸುನಿ ಅಥವಾ ಷಿಯಾ ಆಗಿರುವ ಇತರ ಮುಸ್ಲಿಮರನ್ನು ಮಂಡಲಿಯ ತಾತ್ಕಾಲಿಕ ಸದಸ ರನ್ನಾಗಿ ಸಹಯೋಜಿಸಿಕೊಳ್ಳಬಹುದು.

(ಚ) ಮುತವಲ್ಲಿಗಳು ಒಪ್ಪಿಸಿದ ಆಯವ್ಯಯ ಪತ್ರಗಳನ್ನು ಪರಿಶೀಲಿಸುವುದು ಹಾಗು ಅನುಮೋದಿಸುವುದು ಮತ್ತು ವಕ್ಫ್‌ಗಳ ಲೆಕ್ಕಪತ್ರಗಳ ಪರಿಶೋಧನೆಗೆ ಏರ್ಪಾಡು ಮಾಡುವುದು ;

(ಛ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುತವಲ್ಲಿಗಳನ್ನು ನೇಮಿಸುವುದು ಮತ್ತು ತೆಗೆದುಹಾಕುವುದು;

(ಜ) ಯಾವುದೇ ವಕ್ ನ ಕಳೆದು ಹೋದ ಸ್ವತ್ತಿನ ವಸೂಲಿಗಾಗಿ ಕ್ರಮಗಳನ್ನು ಕೈಕೊಳ್ಳುವುದು ;

(ಝ) ವಕ್ಫ್‌ಗಳಿಗೆ ಸಂಬಂಧಿಸಿದ ದಾವೆಗಳನ್ನು ಮತ್ತು ವ್ಯವಹರಣೆಗಳನ್ನು ನ್ಯಾಯಾಲಯದಲ್ಲಿ ಹೂಡುವುದು ಮತ್ತು ಪ್ರತಿವಾದಿಸುವುದು;

(ಞ) 36ಕ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಮಾರಾಟದ, ದಾನದ ಅಡಮಾನದ, ವಿನಿಮಯದ ಅಥವಾ ಗೇಣಿಯ ಮೂಲಕ ವಕ್ಫಿನ ಸ್ಥಿರಸ್ವತ್ತಿನ ಯಾವುದೇ ವರ್ಗಾವಣೆಯನ್ನು ಮುಸ್ಲಿಂ ಕಾನೂನಿಗೆ ಅನುಸಾರವಾಗಿ ಮಂಜೂರು ಮಾಡುವುದು :

ಪರಂತು, ಮಂಡಲಿಯ ಸದಸ್ಯರ ಪೈಕಿ, ಕಡೆಯ ಪಕ್ಷ ಮೂರನೇ ಎರಡರಷ್ಟು ಮಂದಿ ಅಂಥ ವ್ಯವಹಾರದ ಪರವಾಗಿ ಮತ ಕೊಟ್ಟ ಹೊರತು, ಅಂಥ ಯಾವ ಮಂಜೂರಾತಿಯನ್ನೂ ಕೊಡತಕ್ಕದ್ದಲ್ಲ.

(ಟ) ವಕ್ಫಿನ ನಿಧಿಯನ್ನು ನಿರ್ವಹಿಸುವುದು ;

(ಠ) ವಕ್ಫಿನ ಸ್ವತ್ತಿಗೆ ಸಂಬಂಧಿಸಿ ಮಂಡಲಿಗೆ ಕಾಲಕಾಲಕ್ಕೆ ಅಗತ್ಯವಾಗಬಹುದಾದ ವಿವರಪತ್ರಗಳನ್ನು, ಅಂಕಿ-ಅಂಶಗಳನ್ನು, ಲೆಕ್ಕಪತ್ರಗಳನ್ನು ಮತ್ತು ಇತರ ಮಾಹಿತಿಯನ್ನು ಮುತವಲ್ಲಿಗಳಿಂದ ತರಿಸಿಕೊಳ್ಳುವುದು ;

(ಡ) ವಕ್ಫಿನ ಸ್ವತ್ತುಗಳನ್ನು, ಅವುಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಅಥವಾ ದಾಖಲೆಗಳನ್ನು ಅಥವಾ ವಿಲೇಖಗಳನ್ನು ಮತ್ತು ದಸ್ತಾವೇಜುಗಳನ್ನು ಪರಿಶೀಲಿಸುವುದು, ಅಥವಾ ಪರಿಶೀಲಿಸುವಂತೆ ಮಾಡುವುದು ;

(ಢ) ವಕ್ಫಿನ ಮತ್ತು ವಕ್ಫ್ ಸ್ವತ್ತಿನ ಸ್ವರೂಪವನ್ನು ಮತ್ತು ವ್ಯಾಪ್ತಿಯನ್ನು ತನಿಖೆ ಮಾಡುವುದು ಹಾಗು ನಿರ್ಧರಿಸುವುದು, ಮತ್ತು ಅವಶ್ಯವಾದಾಗಲೆಲ್ಲಾ ವಕ್ಫ್ ಸ್ವತ್ತುಗಳ ಸಮೀಕ್ಷೆಯನ್ನು ನಡೆಸುವಂತೆ ಮಾಡುವುದು;

(ಣ) ವಕ್ಫ್‌ಗಳನ್ನು ಸೂಕ್ತವಾಗಿ ನಿಯಂತ್ರಿಸುವುದಕ್ಕೆ, ಸುಸ್ಥಿತಿಯಲ್ಲಿಡುವುದಕ್ಕೆ ಮತ್ತು ಅವುಗಳ ಆಡಳಿತಕ್ಕೆ ಸಾಮಾನ್ಯವಾಗಿ ಅವಶ್ಯವಾಗ ಬಹುದಾದಂಥ ಎಲ್ಲ ಕಾರ್ಯಗಳನ್ನು ಮಾಡುವುದು.

(3) (2)ನೇ ಉಪಪ್ರಕರಣದ (ಢ) ಖಂಡದ ಮೇರೆಗೆ ಯಾವುದೇ ವ್ಯವಸ್ಥಾಪನಾ ಯೋಜನೆಯನ್ನು ಮಂಡಲಿಯು ನಿರ್ಧರಿಸಿದಲ್ಲಿ ಅಥವಾ (2)ನೇ ಉಪಪ್ರಕರಣದ (ಜ) ಖಂಡದ ಮೇರೆಗೆ ಯಾವುದೇ ನಿರ್ದೇಶವನ್ನು ಕೊಟ್ಟಲ್ಲಿ, ವಕ್ಫಿನಲ್ಲಿ ಹಿತಾಸಕ್ತಿಯುಳ್ಳ ಅಥವಾ ಅಂಥ ನಿರ್ಧಾರದಿಂದ ಅಥವಾ ನಿರ್ದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ನಿರ್ಧಾರವನ್ನು ಅಥವಾ ನಿರ್ದೇಶಗಳನ್ನು ತಳ್ಳಿ ಹಾಕುವುದಕ್ಕಾಗಿ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು ಮತ್ತು ಆ ಬಗ್ಗೆ ಸಿವಿಲ್ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರ ತಕ್ಕುದು.

16. ಮಂಡಲಿಯ ಸಮಿತಿಗಳು—(1). ಮಂಡಲಿಯು, ತಾನು ಅವಶ್ಯವೆಂದು ಪರ್ಯಾಲೋಚಿಸಿದಾಗಲೆಲ್ಲಾ ಸಾಮಾನ್ಯವಾಗಿ ಅಥವಾ ಒಂದು ವಿಶಿಷ್ಟ ಉದ್ದೇಶಕ್ಕಾಗಿ ಅಥವಾ ಯಾವುದೇ ನಿರ್ದಿಷ್ಟ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ ವಕ್ಫ್‌ಗಳ ಮೇಲ್ವಿಚಾರಣೆಗೆ ಸಮಿತಿಗಳನ್ನು ಸ್ಥಾಪಿಸ ಬಹುದು.

(2) ಅಂಥ ಸಮಿತಿಗಳ ರಚನೆಯನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸತಕ್ಕದು :

ಪರಂತು, ಅಂಥ ಸಮಿತಿಗಳ ಸದಸ್ಯರು ಮಂಡಲಿಯ ಸದಸ್ಯರಾಗಿರಬೇಕಾದ ಅವಶ್ಯ ಕತೆಯಿರತಕ್ಕುದಲ್ಲ.

17. ಅಧ್ಯಕ್ಷನ ಮತ್ತು ಸದಸ್ಯರ ರಾಜೀನಾಮೆ.—ಅಧ್ಯಕ್ಷನು ಅಥವಾ ಇತರ ಯಾವನೇ ಸದಸ್ಯನು ಬರೆದು ಸಹಿ ಮಾಡಿ ರಾಜ್ಯ ಸರ್ಕಾರಕ್ಕೆ ಕಳಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು:

ಪರಂತು, ತಮ್ಮ ಉತ್ತರಾಧಿಕಾರಿಯ ನೇಮಕವು ಸರ್ಕಾರಿ ರಾಜಪತ್ರದಲ್ಲಿ ಅಧಿ ಸೂಚಿತವಾಗುವವರೆಗೆ ಅಧ್ಯಕ್ಷನು ಅಥವಾ ಸದಸ್ಯರು ಪದದಲ್ಲಿ ಮುಂದುವರಿಯತಕ್ಕದು.

18. ಅಧ್ಯಕ್ಷನನ್ನು ಅಥವಾ ಸದಸ್ಯರನ್ನು ತೆಗೆದು ಹಾಕುವುದು.—(1) ರಾಜ್ಯಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಮಂಡಲಿಯ ಅಧ್ಯಕ್ಷನನ್ನು ಅಥವಾ ಅದರ ಯಾವನೇ ಸದಸ್ಯನನ್ನು—

(ಕ) 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅನರ್ಹತೆಗಳಿಗೆ ಅವನು ಒಳಪಟ್ಟಿದ್ದರೆ ಅಥವಾ ಒಳಪಟ್ಟರೆ; ಅಥವಾ

(ಖ) ಅವನು ಕೆಲಸ ಮಾಡಲು ಇನ್ಕಾರು ಮಾಡಿದರೆ ಅಥವಾ ಕೆಲಸ ಮಾಡಲು ಅಸಮರ್ಥನಾಗಿದ್ದರೆ ಅಥವಾ ಅವನು ಕೊಡಬಹುದಾದ ಯಾವುದೇ ವಿವರಣೆಯನ್ನು ಕೇಳಿದ ತರುವಾಯ ವಕ್ಫ್‌ಗಳ ಹಿತಾಸಕ್ತಿಗೆ ಪ್ರತಿಕೂಲವಾಗಿದೆಯೆಂದು ರಾಜ್ಯಸರ್ಕಾರವು ಪರ್ಯಾಲೋಚಿಸುವ ರೀತಿಯಲ್ಲಿ ಅವನು ಕೆಲಸ ಮಾಡಿದರೆ; ಅಥವಾ

(ಗ) ಮಂಡಲಿಯು ಸಾಕಷ್ಟೆಂದು ಅಭಿಪ್ರಾಯ ಪಡುವ ಕಾರಣವಿಲ್ಲದೆ, ಮಂಡಲಿಯ ಒಂದಾದ ಮೇಲೊಂದು ಬರುವ ಮೂರು ಸಭೆಗಳಿಗೆ ಹಾಜರಾಗಲು ವಿಫಲನಾದರೆ;

—ತೆಗೆದು ಹಾಕಬಹುದು.

(2) ಮಂಡಲಿಯ ಅಧ್ಯಕ್ಷನನ್ನು (1) ನೇ ಉಪಪ್ರಕರಣದ ಮೇರೆಗೆ ತೆಗೆದುಹಾಕಿದಲ್ಲಿ ಅವನು ಮಂಡಲಿಯ ಸದಸ್ಯನಾಗಿರುವುದು ಸಹ ಮುಕ್ತಾಯವಾಗತಕ್ಕದ್ದು.

19. ಖಾಲಿ ಸ್ಥಾನವನ್ನು ಭರ್ತಿ ಮಾಡುವುದು.—ಯಾವನೇ ಸದಸ್ಯನನ್ನು ತೆಗೆದುಹಾಕುವುದರಿಂದಾಗಿ, ಅವನ ರಾಜೀನಾಮೆಯಿಂದಾಗಿ, ಅವನ ಮರಣದಿಂದಾಗಿ ಅಥವಾ ಅನ್ಯಥಾ ಆ ಸದಸ್ಯನ ಸ್ಥಾನವು ಖಾಲಿಯಾದಾಗ, ಅವನ ಸ್ಥಾನದಲ್ಲಿ ಹೊಸ ಸದಸ್ಯನನ್ನು ನೇಮಿಸತಕ್ಕದ್ದು ಮತ್ತು ಅಂಥ ಸದಸ್ಯನು, ಯಾವ ಸದಸ್ಯನ ಸ್ಥಾನದಲ್ಲಿ ತಾನು ನೇಮಿತನಾಗಿದ್ದಾನೋ ಆ ಸದಸ್ಯನು ಹಾಗೆ ಸ್ಥಾನವು ಖಾಲಿಯಾಗದಿದ್ದರೆ ಎಲ್ಲಿಯವರೆಗೆ ಆ ಪದದಲ್ಲಿರಲು ಹಕ್ಕುಳ್ಳವನಾಗಿರುತ್ತಿದ್ದನೋ ಅಲ್ಲಿಯವರೆಗೆ ಆ ಪದದಲ್ಲಿ ಇರತಕ್ಕದ್ದು.

20. ಸದಸ್ಯರ ಪೈಕಿ ಉಂಟಾದ ಖಾಲಿ ಸ್ಥಾನಗಳು ಅಥವಾ ರಚನೆಯಲ್ಲಿರುವ ದೋಷವು ಮಂಡಲಿಯ ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.—ಮಂಡಲಿಯ ಸದಸ್ಯರ ಪೈಕಿ ಯಾವುದೇ ಸ್ಥಾನವು ಖಾಲಿಯಿರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ ಕಾರಣ ಮಾತ್ರದಿಂದಲೇ, ಮಂಡಲಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಅಸಿಂಧುವಾಗತಕ್ಕದ್ದಲ್ಲ.

21. ಮಂಡಲಿಯ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು.—(1) ಮಂಡಲಿಗೆ ಒಬ್ಬ ಕಾರ್ಯದರ್ಶಿ ಇರತಕ್ಕದ್ದು, ಅವನು ಮುಸ್ಲಿಮನಾಗಿರತಕ್ಕದ್ದು ಮತ್ತು ಮಂಡಲಿಯೊಡನೆ ಸಮಾಲೋಚಿಸಿ ರಾಜ್ಯಸರ್ಕಾರವು ಅವನನ್ನು ನೇಮಿಸತಕ್ಕದ್ದು.

(2) ಕಾರ್ಯದರ್ಶಿಯು ಮಂಡಲಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು ಮತ್ತು ಅದರ ಆಡಳಿತದ ನಿಯಂತ್ರಣದಲ್ಲಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಡೆಸುವುದಕ್ಕೆ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಮಂಡಲಿಯು ನೇಮಿಸಬಹುದು.

22. ಪ್ರತ್ಯಾಯೋಜನೆ.—ಬರಹ ರೂಪದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದೇಶಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ (ಯಾವುವಾದರೂ ಇದ್ದರೆ) ಒಳಪಟ್ಟು, ತಾನು ಅವಶ್ಯವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಧ್ಯಕ್ಷನಿಗೆ ಅಥವಾ ಇತರ ಯಾವನೇ ಸದಸ್ಯನಿಗೆ ಅಥವಾ ಮಂಡಲಿಯ ಕಾರ್ಯದರ್ಶಿಗೆ ಅಥವಾ ಇತರ ಯಾವನೇ ಅಧಿಕಾರಿಗೆ ಅಥವಾ ನೌಕರರಿಗೆ ಅಥವಾ ಮಂಡಲಿಯ ಯಾವುದೇ ಸಮಿತಿಗೆ ಮಂಡಲಿಯು ಪ್ರತ್ಯಾಯೋಜಿಸಬಹುದು.

23. ದಾಖಲೆಗಳನ್ನು ಪರಿಶೀಲಿಸುವುದು ಮತ್ತು ಪ್ರತಿಗಳನ್ನು ಕೊಡುವುದು.—(1) ತನ್ನ ವ್ಯವಹರಣೆಗಳನ್ನು ಅಥವಾ ತನ್ನ ಅಭಿರಕ್ಷೆಯಲ್ಲಿರುವ ಇತರ ದಾಖಲೆಗಳನ್ನು ಪರಿಶೀಲಿಸಲು ಮಂಡಲಿಯು ಅವಕಾಶ ಕೊಡಬಹುದು ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಹಾಗುಅಂಥ ಷರತ್ತುಗಳಿಗೊಳಪಟ್ಟು ಅವುಗಳ ಪ್ರತಿಗಳನ್ನು ಕೊಡಬಹುದು.

(2) ಈ ಪ್ರಕರಣದ ಮೇರೆಗೆ ಕೊಡಲಾದ ಎಲ್ಲ ಪ್ರತಿಗಳನ್ನು, ಭಾರತ ಸಾಕ್ಷ್ಯ ಅಧಿನಿಯಮ, 1872, (1872ರ 1)ರ 76ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಮಂಡಲಿಯ ಕಾರ್ಯದರ್ಶಿಯು ಪ್ರಮಾಣೀಕರಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೂಲಕ ಕಾರ್ಯದರ್ಶಿಗೆ ಪ್ರದತ್ತವಾದ ಅಧಿಕಾರಗಳನ್ನು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಮಂಡಲಿಯಿಂದ ಅಧಿಕೃತನಾದ ಮಂಡಲಿಯ ಇತರ ಅಧಿಕಾರಿಯು ಅಥವಾ ಅಧಿಕಾರಿಗಳು ಸಹ ಚಲಾಯಿಸಬಹುದು.

24.—ಸಂಸತ್ತಿನ ಸದಸ್ಯತ್ವದ ಅನರ್ಹತೆಯನ್ನು ಪ್ರತಿಬಂಧಿಸುವುದು.—ಮಂಡಲಿಯ ಅಧ್ಯಕ್ಷನ ಮತ್ತು ಸದಸ್ಯರ ಪದಗಳು, ಅವುಗಳನ್ನು ಹೊಂದಿದವರನ್ನು, ಅವರು ಸಂಸತ್ತಿನ ಸದಸ್ಯರಾಗಿ ಚುನಾಯಿತರಾಗುವುದಕ್ಕೆ ಅಥವಾ ಸದಸ್ಯರಾಗಿರುವುದಕ್ಕೆ, ಅನರ್ಹಗೊಳಿಸತಕ್ಕದ್ದಲ್ಲವೆಂದು, ಮತ್ತು ಎಂದೂ ಅನರ್ಹಗೊಳಿಸಿಲ್ಲವೆಂದು ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ—IV

### ವಕ್ಫ್‌ಗಳ ನೋಂದಣಿ

25. ನೋಂದಣಿ.—(1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಅನಂತರ ರಚಿತವಾಗಿರುವ ಪ್ರತಿಯೊಂದು ವಕ್ಫ್‌ನ್ನು ಮಂಡಲಿಯ ಕಛೇರಿಯಲ್ಲಿ ನೋಂದಾಯಿಸತಕ್ಕದ್ದು.

(2) ನೋಂದಣಿಯ ಅರ್ಜಿಯನ್ನು ಮುತವಲ್ಲಿಯು ಸಲ್ಲಿಸತಕ್ಕದ್ದು:

ಪರಂತು, ಅಂಥ ಅರ್ಜಿಗಳನ್ನು ವಾಕಿಫ್‌ನಾಗಲಿ ಅಥವಾ ಅವನ ವಂಶಜರಾಗಲಿ ಅಥವಾ ವಕ್ಫ್‌ನ ಫಲಾನುಭವಿಯಾಗಲಿ ಅಥವಾ ವಕ್ಫ್ ಯಾವ ಪಂಥಕ್ಕೆ ಸೇರಿರುತ್ತದೋ ಆ ಪಂಥಕ್ಕೆ ಸೇರಿದ ಯಾವನೇ ಮುಸ್ಲಿಮನಾಗಲಿ ಸಲ್ಲಿಸಬಹುದು.

(3) ಮಂಡಲಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಸ್ಥಳದಲ್ಲಿ ನೋಂದಣಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಈ ಕೆಳಕಂಡ ವಿವರಗಳನ್ನು ಅದು ಒಳಗೊಂಡಿರತಕ್ಕದ್ದು.

(ಕ) ವಕ್ಫ್ ಸ್ವತ್ತುಗಳನ್ನು ಗುರುತಿಸಲು ಸಾಕಾಗುವಷ್ಟು ಅವುಗಳ ವರ್ಣನೆ ;

(ಖ) ಅಂಥ ಸ್ವತ್ತುಗಳಿಂದ ಬರುವ ಒಟ್ಟು ವಾರ್ಷಿಕ ಆದಾಯ ;

(ಗ) ವಕ್ಫ್ ಸ್ವತ್ತುಗಳ ಸಂಬಂಧದಲ್ಲಿ ವಾರ್ಷಿಕವಾಗಿ ಸಂದಾಯ ಮಾಡಬೇಕಾದ ಭೂಕಂದಾಯದ ಮತ್ತು ಉಪಕರಗಳ, ಹಾಗು ಎಲ್ಲ ದರಗಳ ಮತ್ತು ತೆರಿಗೆಗಳ ಮೊಬಲಗು;

(ಘ) ವಕ್ಫ್ ಸ್ವತ್ತುಗಳ ಆದಾಯವನ್ನು ವಸೂಲಿ ಮಾಡುವಲ್ಲಿ ವಾರ್ಷಿಕವಾಗಿ ತಗಲುವ ವೆಚ್ಚಗಳ ಅಂದಾಜು ;

(ಙ) (i) ಮುತವಲ್ಲಿಯ ಸಂಬಳ ಮತ್ತು ಆಸಾಮಿಗಳ ಭತ್ಯಗಳು ;

(ii) ಕೇವಲ ಧಾರ್ಮಿಕ ಉದ್ದೇಶಗಳು ;

(iii) ಧರ್ಮಾರ್ಥ ಉದ್ದೇಶಗಳು ಮತ್ತು

(iv) ಇತರ ಯಾವುದೇ ಉದ್ದೇಶಗಳು ;

—ಇವುಗಳಿಗಾಗಿ ವಕ್ಫ್‌ನಲ್ಲಿ ಪ್ರತ್ಯೇಕವಾಗಿ ತೆಗೆದಿರಿಸಿದ ಮೊಬಲಗು;

(ಚ) ಮಂಡಲಿಯು ನಿಯಮಿಸಿದ ಇತರ ಯಾವುವೇ ವಿವರಗಳು.

(4) ಅಂಥ ಪ್ರತಿಯೊಂದು ಅರ್ಜಿಯ ಜೊತೆಗೆ ವಕ್ಫ್ ವಿಲೇಖದ ಒಂದು ಪ್ರತಿಯು ಇರತಕ್ಕದು ಅಥವಾ ಅಂಥ ಯಾವ ವಿಲೇಖವನ್ನೂ ಮಾಡಿರದಿದ್ದರೆ ಅಥವಾ ಅದರ ಪ್ರತಿಯನ್ನು ಪಡೆಯಲು ಸಾಧ್ಯವಾಗದಿದ್ದರೆ, ಅರ್ಜಿದಾರನಿಗೆ ತಿಳಿದಿರುವಷ್ಟರಮಟ್ಟಿಗೆ ವಕ್ಫ್‌ನ ಮೂಲದ ಸ್ವರೂಪ ಮತ್ತು ಉದ್ದೇಶಗಳ ಪೂರ್ಣ ವಿವರಗಳು ಅದರಲ್ಲಿ ಇರತಕ್ಕದು.

(5) (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಅರ್ಜಿಗೆ ವಾದ ಪ್ರತಿವಾದ ಪತ್ರಗಳಿಗೆ ಸಹಿ ಮಾಡುವುದಕ್ಕೆ ಮತ್ತು ಅವುಗಳನ್ನು ಸತ್ಯಾಪನೆ ಮಾಡುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಅರ್ಜಿದಾರನು ಸಹಿ ಮಾಡತಕ್ಕದು ಮತ್ತು ಅದನ್ನು ಸತ್ಯಾಪನೆ ಮಾಡತಕ್ಕದು.

(6) ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಯಾವುವೇ ಹೆಚ್ಚಿನ ವಿವರಗಳನ್ನು ಅಥವಾ ಮಾಹಿತಿಯನ್ನು ಒದಗಿಸುವಂತೆ ಮಂಡಲಿಯು ಅರ್ಜಿದಾರನನ್ನು ಅಗತ್ಯಪಡಿಸಬಹುದು.

(7) ನೋಂದಣಿಗಾಗಿ ಅರ್ಜಿಯು ಬಂದ ಮೇಲೆ, ವಕ್ಫ್‌ನ್ನು ನೋಂದಾಯಿಸುವ ಮುಂಚೆ ಅರ್ಜಿಯ ನೈಜತೆಯ ಮತ್ತು ಸಿಂಧುತ್ವದ ಬಗ್ಗೆ ಹಾಗೂ ಅದರಲ್ಲಿರುವ ಯಾವುವೇ ವಿವರಗಳ ಯಥಾರ್ಥತೆಯ ಬಗ್ಗೆ ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆಗಳನ್ನು ಮಂಡಲಿಯು ನಡೆಸಬಹುದು ಮತ್ತು ವಕ್ಫ್‌ನ ಸ್ವತ್ತಿನ ಆಡಳಿತವನ್ನು ನಿರ್ವಹಿಸುತ್ತಿರುವ ವ್ಯಕ್ತಿಯಲ್ಲದ ಇತರ ಯಾವನೇ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿರುವಾಗ, ವಕ್ಫ್‌ನ್ನು ನೋಂದಾಯಿಸುವ ಮುಂಚೆ ವಕ್ಫ್‌ನ ಸ್ವತ್ತಿನ ಆಡಳಿತವನ್ನು ನಿರ್ವಹಿಸುತ್ತಿರುವ ವ್ಯಕ್ತಿಗೆ ಮಂಡಲಿಯು ಅರ್ಜಿಯ ಬಗ್ಗೆ ನೋಟೀಸನ್ನು ಕೊಡತಕ್ಕದು ಮತ್ತು ಅವನು ತನ್ನ ಅಹವಾಲನ್ನು ಹೇಳಲು ಇಚ್ಛಿಸಿದರೆ, ಅವನ ಹೇಳಿಕೆಯನ್ನು ಕೇಳತಕ್ಕದು.

(8) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ರಚಿತವಾದ ವಕ್ಫ್‌ಗಳ ಸಂದರ್ಭದಲ್ಲಿ, ಅಂಥ ಪ್ರಾರಂಭದಿಂದ ಮೂರು ತಿಂಗಳೊಳಗೆ ಮತ್ತು ಅಂಥ ಪ್ರಾರಂಭದ ಅನಂತರ ರಚಿತವಾದ ವಕ್ಫ್‌ಗಳ ಸಂದರ್ಭದಲ್ಲಿ, ಆ ವಕ್ಫ್ ರಚನೆಯಾದ ದಿನಾಂಕದಿಂದ ಮೂರು ತಿಂಗಳೊಳಗೆ, ನೋಂದಣಿಯ ಪ್ರತಿಯೊಂದು ಅರ್ಜಿಯನ್ನು ಸಲ್ಲಿಸತಕ್ಕದು.

26. ವಕ್ಫ್‌ಗಳ ರಿಜಿಸ್ಟರು.—ಮಂಡಲಿಯು ವಕ್ಫ್‌ಗಳ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದು ಮತ್ತು ಪ್ರತಿಯೊಂದು ವಕ್ಫ್‌ನ ಸಂಬಂಧದಲ್ಲಿ ವಕ್ಫ್‌ನ ವಿಲೇಖಗಳು ದೊರೆಯುವಂತಿದ್ದರೆ ಅವುಗಳ ಪ್ರತಿಗಳು ಮತ್ತು ಕೆಳಕಂಡ ವಿವರಗಳು ಅದರಲ್ಲಿ ಇರತಕ್ಕದು. ಎಂದರೆ:—

(ಕ) ವಕ್ಫ್‌ನ ವರ್ಗ ;

(ಖ) ಮುತವಲ್ಲಿಯ ಹೆಸರು ;

(ಗ) ವಕ್ಫ್‌ನ ವಿಲೇಖದ ಮೇರೆಗೆ ಅಥವಾ ಯಾವುದೇ ರೂಢಿಯ ಅಥವಾ ಆಚರಣೆಯ ಮೂಲಕ ಮುತವಲ್ಲಿಯ ಪದಕ್ಕೆ ಬರುವ ಬಗ್ಗೆ ಉತ್ತರಾಧಿಕಾರದ ನಿಯಮ

(ಘ) ವಕ್ಫ್‌ನ ಎಲ್ಲ ಸ್ವತ್ತುಗಳ ವಿವರಗಳು ಮತ್ತು ಅವುಗಳಿಗೆ ಸಂಬಂಧಿಸಿದ ಎಲ್ಲ ಸ್ವಾಮ್ಯ ವಿಲೇಖಗಳು ಮತು ದಸ್ತಾವೇಜುಗಳು ;

(ಙ) ನೋಂದಣಿಯ ಕಾಲದಲ್ಲಿರುವ ಆಡಳಿತ ಯೋಜನೆಯ ಮತ್ತು ವೆಚ್ಚದ ಯೋಜನೆಯ ವಿವರಗಳು;

(ಚ) ನಿಯಮಿಸಬಹುದಾದಂಥ ಇತರ ವಿವರಗಳು.

27. ಯಾವುದೇ ಸ್ವತ್ತು ವಕ್ಫ್ ಸ್ವತ್ತಾಗಿದೆಯೇ ಎಂಬ ಬಗ್ಗೆ ತೀರ್ಮಾನ.—(1) ಯಾವ ಸ್ವತ್ತು ವಕ್ಫ್ ಸ್ವತ್ತೆಂದು ತನಗೆ ನಂಬಲು ಕಾರಣವಿದೆಯೋ ಆ ಸ್ವತ್ತಿನ ಬಗ್ಗೆ ಮಾಹಿತಿಯನ್ನು ಮಂಡಲಿಯು ತಾನೇ ಸಂಗ್ರಹಿಸಬಹುದು ಮತ್ತು ಒಂದು ನಿರ್ದಿಷ್ಟ ಸ್ವತ್ತು ವಕ್ಫ್ ಸ್ವತ್ತೇ ಅಲ್ಲವೇ ಎಂಬ ಬಗ್ಗೆ ಅಥವಾ ಒಂದು ವಕ್ಫ್ ಸುನ್ನಿ ವಕ್ಫೇ ಅಥವಾ ಷಿಯಾ ವಕ್ಫೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅದು ಆ ಪ್ರಶ್ನೆಯನ್ನು ತೀರ್ಮಾನಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಪ್ರಶ್ನೆಯ ಮೇಲೆ ಮಂಡಲಿಯು ಮಾಡಿದ ತೀರ್ಮಾನವು, ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯವು ಅದನ್ನು ರದ್ದುಪಡಿಸಿದಲ್ಲದೆ ಅಥವಾ ಮಾರ್ಪಾಡು ಮಾಡಿದಲ್ಲದೆ, ಅಂತಿಮವಾಗಿರತಕ್ಕದು.

28. ವಕ್ಫನ್ನು ನೋಂದಾಯಿಸುವಂತೆ ಮಾಡುವ ಮತ್ತು ರಿಜಿಸ್ಟರನ್ನು ದುರಸ್ತಿಮಾಡುವ ಅಧಿಕಾರ.—ವಕ್ಫನ್ನು ನೋಂದಾಯಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸುವಂತೆ ಅಥವಾ ವಕ್ಫ್‌ನ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಮುತವಲ್ಲಿಗೆ ಮಂಡಲಿಯು ನಿರ್ದೇಶಿಸಬಹುದು ಅಥವಾ ವಕ್ಫನ್ನು ನೋಂದಾಯಿಸುವಂತೆ ತಾನೇ ಮಾಡಬಹುದು ಅಥವಾ ಯಾವುದೇ ಕಾಲದಲ್ಲಿ ವಕ್ಫ್‌ನ ರಿಜಿಸ್ಟರನ್ನು ದುರಸ್ತಿ ಮಾಡಬಹುದು.

29. ನೋಂದಾಯಿತ ವಕ್ಫ್‌ಗಳ ಬದಲಾವಣೆಯನ್ನು ತಿಳಿಸುವುದು.—(1) ಮುತವಲ್ಲಿಯ ಮರಣದಿಂದಾಗಿ ಅಥವಾ ನಿವೃತ್ತಿಯಿಂದಾಗಿ ಅಥವಾ ಅವನನ್ನು ತೆಗೆದುಹಾಕಿದುದರಿಂದ ನೋಂದಾಯಿತ ವಕ್ಫ್‌ನ ವ್ಯವಸ್ಥಾಪನೆಯಲ್ಲಿ ಯಾವುದೇ ಬದಲಾವಣೆಯು ಉಂಟಾದ ಸಂದರ್ಭದಲ್ಲಿ, ಹೊಸದಾಗಿ ಬರುವ ಮುತವಲ್ಲಿಯು ಕೂಡಲೇ ಆ ಬದಲಾವಣೆಯನ್ನು ಮಂಡಲಿಗೆ ತಿಳಿಸತಕ್ಕದು, ಮತ್ತು ಇತರ ಯಾವನೇ ವ್ಯಕ್ತಿಯು ಅದನ್ನು ತಿಳಿಸಬಹುದು.

(2) 25ನೇ ಪ್ರಕರಣದಲ್ಲಿ ನಮೂದಿಸಲಾಗಿರುವ ವಿವರಗಳಲ್ಲಿ ಯಾವುದರಲ್ಲಾದರೂ ಇತರ ಯಾವುದೇ ಬದಲಾವಣೆಯು ಉಂಟಾಗಿರುವ ಸಂದರ್ಭದಲ್ಲಿ ಆ ಬದಲಾವಣೆಯು ಸಂಭವಿಸಿದ ಮೂರು ತಿಂಗಳೊಳಗೆ, ಅಂಥ ಬದಲಾವಣೆಯನ್ನು ಮುತವಲ್ಲಿಯು ಮಂಡಲಿಗೆ ತಿಳಿಸತಕ್ಕದು.

30. ಉಳಿಸುವಿಕೆಗಳು.—ಈ ಅಧ್ಯಾಯದಲ್ಲಿ ಏನೇ ಇದ್ದರೂ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ವಕ್ಫ್ ನೋಂದಾಯಿತವಾಗಿದ್ದಲ್ಲಿ, ಆ ವಕ್ಫನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ನೋಂದಾಯಿಸುವುದು ಅವಶ್ಯಕವಾಗಿರತಕ್ಕುದಲ್ಲ ಮತ್ತು ಅಂಥ ಪ್ರಾರಂಭಕ್ಕೆ ಮುಂಚೆ ಮಾಡಲಾದ ಅಂಥ ಯಾವುದೇ ನೋಂದಣಿಯನ್ನು ಈ ಅಧಿನಿಯಮದ ಮೇರೆಗೆ ಮಾಡಲಾದ ನೋಂದಣಿ ಎಂದು ಭಾವಿಸತಕ್ಕದು.

## ಅಧ್ಯಾಯ—V

### ಮುತವಲ್ಲಿಗಳು ಮತ್ತು ವಕ್ಫ್ ಲೆಕ್ಕಪತ್ರಗಳು

31. ಆಯವ್ಯಯ ಪತ್ರ.— ಮುಂದಿನ ಆರ್ಥಿಕ ವರ್ಷದ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ತೋರಿಸುವ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ವಕ್ಫಿನ ಪ್ರತಿಯೊಬ್ಬ ಮುತವಲ್ಲಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಪ್ರತಿವರ್ಷವೂ ತಯಾರಿಸತಕ್ಕುದು ಮತ್ತು ಅನುಮೋದನೆಗಾಗಿ ಮಂಡಲಿಗೆ ಒಪ್ಪಿಸತಕ್ಕುದು.

32. ವಕ್ಫ್‌ಗಳ ಲೆಕ್ಕಪತ್ರಗಳನ್ನು ಒಪ್ಪಿಸುವುದು.—ಪ್ರತಿಯೊಬ್ಬ ಮುತವಲ್ಲಿಯು ನಿಯತವಾದ ಲೆಕ್ಕಪತ್ರಗಳನ್ನು ಇಡತಕ್ಕುದು.

(2) 25ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಅರ್ಜಿಯನ್ನು ಸಲ್ಲಿಸಲಾಗಿರುವ ದಿನಾಂಕದ ನಿಕಟ ತರುವಾಯದ ಮೇ 1ನೇ ದಿನಾಂಕಕ್ಕೆ ಮುಂಚೆ ಮತ್ತು ತದನಂತರ ಪ್ರತಿ ವರ್ಷದ ಮೇ 1ನೇ ದಿನಾಂಕಕ್ಕೆ ಮುಂಚೆ ಸಂದರ್ಭಾನುಸಾರ, ಮಾರ್ಚ್ 31ನೇ ದಿನಾಂಕದಂದು ಮುಕ್ತಾಯವಾಗುವ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಅಥವಾ ಯಾವ ಅವಧಿಯಲ್ಲಿ ಈ ಅಧಿನಿಯಮದ ಉಪಬಂಧಗಳು ವಕ್ಫ್‌ಗೆ ಅನ್ವಯವಾಗಿರುತ್ತವೆಯೋ ಅಂಥ ಸದರಿ ಅವಧಿಯ ಭಾಗದಲ್ಲಿ ವಕ್ಫಿನ ಪರವಾಗಿ ಮುತವಲ್ಲಿಯು ಸ್ವೀಕರಿಸಿದ ಅಥವಾ ವೆಚ್ಚ ಮಾಡಿದ ಎಲ್ಲ ಹಣದ ಬಗ್ಗೆ, ಮಂಡಲಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನೊಳಗೊಂಡ ಲೆಕ್ಕಪತ್ರಗಳ ಪೂರ್ಣವಾದ ಮತ್ತು ನಿಜವಾದ ತಃಖ್ತೆಯನ್ನು ವಕ್ಫಿನ ಪ್ರತಿಯೊಬ್ಬ ಮುತವಲ್ಲಿಯು ತಯಾರಿಸಿ ಮಂಡಲಿಗೆ ಒದಗಿಸತಕ್ಕುದು :

ಪರಂತು, ವಾರ್ಷಿಕ ಲೆಕ್ಕಪತ್ರಗಳನ್ನು ಮುಕ್ತಾಯ ಮಾಡಬೇಕಾದ ದಿನಾಂಕವನ್ನು ಮಂಡಲಿಯ ವಿವೇಚನೆಗನುಸಾರವಾಗಿ ವ್ಯತ್ಯಾಸಗೊಳಿಸಬಹುದು.

33. ವಕ್ಫ್‌ಗಳ ಲೆಕ್ಕಗಳ ಪರಿಶೋಧನೆ.—(1) 32ನೇ ಪ್ರಕರಣದ ಮೇರೆಗೆ ಮಂಡಲಿಗೆ ಒಪ್ಪಿಸಲಾದ ವಕ್ಫ್‌ಗಳ ಲೆಕ್ಕಪತ್ರಗಳನ್ನು ಮಂಡಲಿಯು ನೇಮಿಸಿದ ಲೆಕ್ಕ ಪರಿಶೋಧಕನು ವಾರ್ಷಿಕವಾಗಿ ಅಥವಾ ಮಂಡಲಿಯು ನಿರ್ಧರಿಸಬಹುದಾದಂಥ ಇತರ ಅಂತರಾವಧಿಗಳಲ್ಲಿ ಪರಿಶೋಧಿಸತಕ್ಕುದು ಮತ್ತು ಪರೀಕ್ಷಿಸತಕ್ಕುದು.

(2) ಲೆಕ್ಕ ಪರಿಶೋಧಕನು ತನ್ನ ವರದಿಯನ್ನು ಮಂಡಲಿಗೆ ಒಪ್ಪಿಸತಕ್ಕುದು ಮತ್ತು ಲೆಕ್ಕ ಪರಿಶೋಧಕನ ವರದಿಯು, ಅಕ್ರಮವಾದ ಕಾನೂನು ಬಾಹಿರವಾದ ಅಥವಾ ಅನುಚಿತವಾದ ವೆಚ್ಚದ ಎಲ್ಲ ಸಂದರ್ಭಗಳನ್ನು ಅಥವಾ ನಿರ್ಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಹಣವನ್ನು ಅಥವಾ ಇತರ ಸ್ವತ್ತನ್ನು ವಸೂಲ್ಮಾಡಲು ವಿಫಲವಾದಎಲ್ಲ ಸಂದರ್ಭಗಳನ್ನು ಮತ್ತು ವರದಿ ಮಾಡುವುದು ಅವಶ್ಯವೆಂದು ಲೆಕ್ಕಪರಿಶೋಧಕನು ಪರ್ಯಾಲೋಚಿಸುವಂಥ ಇತರ ಯಾವುದೇ ವಿಷಯವನ್ನು, ಇತರ ವಿಷಯಗಳೊಡನೆ ನಿರ್ದಿಷ್ಟಪಡಿಸತಕ್ಕುದು; ಮತ್ತು ಅಂಥ ವೆಚ್ಚಕ್ಕೆ ಅಥವಾ ವಿಫಲತೆಗೆ ಜವಾಬ್ದಾರನಾಗಿರುವನೆಂದು ಲೆಕ್ಕಪರಿಶೋಧಕನು ಅಭಿಪ್ರಾಯ ಪಡುವ ಯಾವನೇ ವ್ಯಕ್ತಿಯ ಹೆಸರು ಸಹ ಆ ವರದಿಯಲ್ಲಿರತಕ್ಕುದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ, ಅಂಥ ವೆಚ್ಚದ ಅಥವಾ ನಷ್ಟದ ಮೊಬಲಗನ್ನು ಅಂಥ ವ್ಯಕ್ತಿಯಿಂದ ಬರಬೇಕಾದ ಬಾಕಿ ಎಂದು ಲೆಕ್ಕ ಪರಿಶೋಧಕನು ಪ್ರಮಾಣೀಕರಿಸತಕ್ಕುದು.

(3) ವಕ್ಫ್ ಲೆಕ್ಕಗಳ ಪರಿಶೋಧನೆಯ ಖರ್ಚನ್ನು ವಕ್ಫ್ ನಿಧಿಯಿಂದ ಸಂದಾಯ ಮಾಡತಕ್ಕುದು.

34. ಲೆಕ್ಕ ಪರಿಶೋಧಕನ ವರದಿಯ ಮೇಲೆ ಮಂಡಲಿಯು ಆದೇಶಗಳನ್ನು ಮಾಡುವುದು.—ಮಂಡಲಿಯು ಲೆಕ್ಕ ಪರಿಶೋಧಕನ ವರದಿಯನ್ನು ಪರೀಕ್ಷಿಸತಕ್ಕುದು, ಮತ್ತು ಅದರಲ್ಲಿ ನಮೂದಿಸಲಾಗಿರುವ ಯಾವುದೇ ವಿಷಯದ ಬಗ್ಗೆ ಯಾವನೇ ವ್ಯಕ್ತಿಯಿಂದ ವಿವರಣೆಯನ್ನು ತರಿಸಿಕೊಳ್ಳಬಹುದು ಮತ್ತು ಆ ವರದಿಯ ಮೇಲೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶಗಳನ್ನು ಮಾಡತಕ್ಕುದು.

35. ಬರಬೇಕಾಗಿದೆಯೆಂದು ಪ್ರಮಾಣೀಕರಿಸಲಾಗಿರುವ ಮೊಬಲಗುಗಳು ಭೂಕಂದಾಯದ ಬಾಕಿಯಂತೆ ವಸೂಲೀಯವಾಗಿರುವುದು.—(1) 33ನೇ ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧಕನು ಕೊಟ್ಟ ವರದಿಯಲ್ಲಿ ಯಾವನೇ ವ್ಯಕ್ತಿಯಿಂದ ಬರಬೇಕಾಗಿದೆಯೆಂದು ಪ್ರಮಾಣೀಕರಿಸಲಾಗಿರುವ ಪ್ರತಿಯೊಂದು ಮೊಬಲಗನ್ನು, 34ನೇ ಪ್ರಕರಣದ ಮೇರೆಗೆ ಮಂಡಲಿಯು ಮಾಡಿದ ಆದೇಶದಿಂದ ಅಂಥ ಪ್ರಮಾಣಪತ್ರವನ್ನು ಮಾರ್ಪಾಟು ಮಾಡಿದ ಹೊರತು ಅಥವಾ ರದ್ದುಗೊಳಿಸಿದ ಹೊರತು, ಮತ್ತು ಮಾರ್ಪಾಟಾದ ಪ್ರಮಾಣಪತ್ರದ ಮೇರೆಗೆಬರಬೇಕಾಗಿರುವ ಪ್ರತಿಯೊಂದು ಮೊಬಲಗನ್ನು, ಮಂಡಲಿಯು ಈ ಬಗ್ಗೆ ಹೊರಡಿಸಿದ ಮಾಗಣಿ ನೋಟೀಸು ಜಾರಿಯಾದ ದಿನಾಂಕದ ತರುವಾಯದ ಅರವತ್ತು ದಿನಗಳೊಳಗೆ ಅಂಥ ವ್ಯಕ್ತಿಯು ಸಂದಾಯ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ಸಂದಾಯವನ್ನು ಮಾಡದಿದ್ದರೆ, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟು ಅನಂತರ, ಮಂಡಲಿಯು ಕೊಡುವ ಪ್ರಮಾಣಪತ್ರದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಭೂಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ವಸೂಲ್ಮಾಡಬಹುದು.

36. ಮುತವಲ್ಲಿಗಳ ಕರ್ತವ್ಯಗಳು.—

(ಕ) ಮಂಡಲಿಯ ನಿರ್ದೇಶಗಳನ್ನು ಕಾರ್ಯಗತಗೊಳಿಸುವುದು;

(ಖ) ಮಂಡಲಿಗೆ ಕಾಲಕಾಲಕ್ಕೆ ಅಗತ್ಯವಾಗಬಹುದಾದಂಥ ವಿವರ ಪತ್ರಗಳನ್ನು ಒದಗಿಸುವುದು ಮತ್ತು ಅಂಥ ಮಾಹಿತಿಯನ್ನು ಅಥವಾ ವಿವರಗಳನ್ನು ಪೂರೈಸುವುದು ;

(ಗ) ವಕ್ಫ್ ಸ್ವತ್ತುಗಳ, ಅವುಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ಅಥವಾ ದಾಖಲೆಗಳ ಅಥವಾ ವಿಲೇಖಗಳ ಮತ್ತು ದಸ್ತಾವೇಜುಗಳ ಪರಿಶೀಲನೆಗೆ ಅವಕಾಶ ಕೊಡುವುದು ;

(ಘ) ಎಲ್ಲ ಸಾರ್ವಜನಿಕ ಬಾಕಿಗಳನ್ನು ತೀರಿಸುವುದು; ಮತ್ತು

(ಙ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಕಾನೂನು ಬದ್ಧವಾಗಿ ಅವನು ಮಾಡಬೇಕಾಗಿರುವ ಇತರ ಯಾವುದೇ ಕಾರ್ಯವನ್ನು ಮಾಡುವುದು ;

—ಪ್ರತಿಯೊಬ್ಬ ಮುತವಲ್ಲಿಯ ಕರ್ತವ್ಯವಾಗಿರತಕ್ಕುದು.

36ಕ. ವಕ್ಫ್‌ಗಳ ಸ್ಥಿರ ಸ್ವತ್ತಿನ ವರ್ಗಾವಣೆ.—ವಕ್ಫ್ ವಿಲೇಖದಲ್ಲಿ ಏನೇ ಇದ್ದರೂ ಮಂಡಲಿಯ ಪೂರ್ವ ಮಂಜೂರಾತಿಯಿಲ್ಲದೆ.—

(i) ಮಾರಾಟದ, ದಾನದ, ಅಡಮಾನದ ಅಥವಾ ವಿನಿಮಯದ ಮೂಲಕ, ಅಥವಾ

(ii) ಬೇಸಾಯ ಭೂಮಿಯ ಸಂಬಂಧದಲ್ಲಿ, ಮೂರು ವರ್ಷಗಳಿಗೆ ಮೀರಿದ ಅವಧಿಯವರೆಗೆ, ಅಥವಾ ಬೇಸಾಯೇತರ ಭೂಮಿಯ ಅಥವಾ ಕಟ್ಟಡದ ಸಂಬಂಧದಲ್ಲಿ ಒಂದು ವರ್ಷಕ್ಕೆ ಮೀರಿದ ಅವಧಿಯವರೆಗೆ, ಗೇಣಿಯ ಮೂಲಕ,

—ಮಾಡಿದ ವಕ್ಫಿನ ಯಾವುದೇ ಸ್ಥಿರಸ್ವತ್ತಿನ ಯಾವ ವರ್ಗಾವಣೆಯೂ ಸಿಂಧುವಾಗತಕ್ಕುದಲ್ಲ.

36ಖ. 36ಕ ಪ್ರಕರಣವನ್ನು ಉಲ್ಲಂಘಿಸಿ ವರ್ಗಾಯಿಸಿರುವ ವಕ್ಫ್ ಸ್ವತ್ತಿನ ಮರು ಸ್ವಾಧೀನ.—(1) ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ಅನಂತರ 26ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ವಕ್ಫ್‌ಗಳ ರಿಜಿಸ್ಟರಿನಲ್ಲಿ ಹಾಗೆಂದು ನಮೂದಿಸಲಾಗಿರುವ ವಕ್ಫ್‌ನ ಯಾವುದೇ ಸ್ಥಿರ ಸ್ವತ್ತನ್ನು 36ಕ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮಂಡಲಿಯ ಪೂರ್ವ ಮಂಜೂರಾತಿಯಿಲ್ಲದೆ ವರ್ಗಾಯಿಸಲಾಗಿದೆಯೆಂದು ಮಂಡಲಿಗೆ ಮನದಟ್ಟಾದರೆ, ಯಾವ ಕಲೆಕ್ಟರನ ಅಧಿಕಾರ ವ್ಯಾಪ್ತಿಯೊಳಗೆ ಸ್ವತ್ತು ಇದೆಯೋ ಆ ಕಲೆಕ್ಟರನು ಆ ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಂಡು ತನಗೆ ವಶಾವಣೆ ಕೊಡಬೇಕೆಂದು ಅದು ಅವನಿಗೆ ಕೋರಿಕೆ ಪತ್ರವನ್ನು ಕಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಕೋರಿಕೆ ಪತ್ರವನ್ನು ಸ್ವೀಕರಿಸಿದ ಮೇಲೆ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಗೆ, ಆದೇಶವನ್ನು ಜಾರಿಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಮಂಡಲಿಗೆ ಆ ಸ್ವತ್ತನ್ನು ವರ್ಗಾಯಿಸಬೇಕೆಂದು ನಿರ್ದೇಶಿಸಿ, ಕಲೆಕ್ಟರನು ಆದೇಶವನ್ನು ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು,—

(ಕ) ಯಾವ ವ್ಯಕ್ತಿಗೆ ಅದನ್ನು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಗೆ ಆದೇಶವನ್ನು ಕೊಡುವುದರ ಮೂಲಕ ಅಥವಾ ನೀಡುವುದರ ಮೂಲಕ ಅಥವಾ ಅಂಚೆಯಿಂದ ಕಳುಹಿಸುವುದರ ಮೂಲಕ, ಅಥವಾ

(ಖ) ಅಂಥ ವ್ಯಕ್ತಿಯು ಸಿಕ್ಕದಿದ್ದರೆ, ಅವನು ಕೊನೆಯದಾಗಿ ವಾಸಿಸುತ್ತಿದ್ದಾನೆಂದು ಅಥವಾ ವ್ಯವಹಾರ ನಡೆಸುತ್ತಿದ್ದಾನೆಂದು ತಿಳಿದು ಬಂದಿರುವ ಸ್ಥಳದ ಎದ್ದು ಕಾಣುವ ಭಾಗದಲ್ಲಿ ಆ ಆದೇಶವನ್ನು ಅಂಟಿಸುವುದರ ಮೂಲಕ, ಅಥವಾ ಅವನ ಕುಟುಂಬದ ಪ್ರಾಪ್ತ ವಯಸ್ಕನಾದ ಪುರುಷನಿಗೆ ಅಥವಾ ನೌಕರನಿಗೆ ಕೊಡುವುದರವಮೂಲಕ ಅಥವಾ ನೀಡುವುದರ ಮೂಲಕ ಅಥವಾ ಅದು ಯಾವ ಸ್ವತ್ತಿಗೆ ಸಂಬಂಧಿಸಿದೆಯೋ ಆ ಸ್ವತ್ತಿನ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮಾಡಿ,

—ಜಾರಿ ಮಾಡತಕ್ಕದ್ದು :

ಪರಂತು, ಯಾವ ವ್ಯಕ್ತಿಗೆ ಆದೇಶವನ್ನು ಜಾರಿ ಮಾಡಬೇಕಾಗಿದೆಯೋ ಅವನ ಅಪ್ರಾಪ್ತ ವಯಸ್ಕನಾಗಿದ್ದರೆ, ಅವನ ಸಂರಕ್ಷಕನಿಗೆ ಅಥವಾ ಅವನ ಕುಟುಂಬದ ಯಾವನೇ ವಯಸ್ಕನಾದ ಪುರುಷನಿಗೆ ಅಥವಾ ನೌಕರನಿಗೆ ಮಾಡುವ ಜಾರಿಯನ್ನು ಅಪ್ರಾಪ್ತ ವಯಸ್ಕನಿಗೆ ಮಾಡಿದ ಜಾರಿಯೆಂದು ಭಾವಿಸತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನು ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಯಾವ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿಆ ಸ್ವತ್ತು ಇದೆಯೋ ಆ ಜಿಲ್ಲಾ ನ್ಯಾಯಾಲಯಕ್ಕೆ ಆ ಆದೇಶವು ಜಾರಿಯಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಬಗ್ಗೆ ಜಿಲ್ಲಾ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

ವಿವರಣೆ.—ಈ ಉಪಪ್ರಕರಣದಲ್ಲಿ "ಜಿಲ್ಲಾ ನ್ಯಾಯಾಲಯ" ಎಂದರೆ, ಯಾವ ಪ್ರದೇಶಕ್ಕಾಗಿ ನಗರ ಸಿವಿಲ್ ನ್ಯಾಯಾಲಯವಿದೆಯೋ ಆ ನ್ಯಾಯಾಲಯ, ಮತ್ತು ಇತರ ಯಾವುದೇ ಪ್ರದೇಶದಲ್ಲಿ, ಅಸಲು ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಸಿವಿಲ್ ನ್ಯಾಯಾಲಯ.

(5) (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಪಾಲಿಸದಿದ್ದಲ್ಲಿ ಮತ್ತು ಅಂಥ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸುವ ಕಾಲವು ಅಪೀಲನ್ನು ಸಲ್ಲಿಸದೆಯೆ ಮುಗಿದು ಹೋಗಿದ್ದಲ್ಲಿ ಅಥವಾ ಆ ಕಾಲದೊಳಗೆ ಸಲ್ಲಿಸಲಾದ ಅಪೀಲು ಯಾವುದಾದರೂ ಇದ್ದರೆ, ಅದನ್ನು ವಜಾ ಮಾಡಿದ್ದಲ್ಲಿ, ಯಾವ ಸ್ವತ್ತಿನ ಸಂಬಂಧದಲ್ಲಿ ಆ ಆದೇಶವನ್ನುಮಾಡಲಾಗಿದೆಯೋ ಆ ಸ್ವತ್ತನ್ನು ಆ ಉದ್ದೇಶಕ್ಕೆ ಅವಶ್ಯವಾಗಬಹುದಾದಂಥ ಬಲವನ್ನು, ಉಪಯೋಗಿಸಿ, ಕಲೆಕ್ಟರನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದನ್ನು ಮಂಡಲಿಗೆ ವಶಾವಣೆ ಮಾಡತಕ್ಕದ್ದು.

(6) ಈ ಪ್ರಕರಣದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ರಾಜ್ಯಸರ್ಕಾರವು ಈ ಬಗ್ಗೆ ಮಾಡಬಹುದಾದಂಥ ನಿಯಮಗ ಮೂಲಕ ಕಲೆಕ್ಟರನು ಮಾರ್ಗದರ್ಶನ ಹೊಂದತಕ್ಕದ್ದು.

37. ವಕ್ಫ್ ಸ್ವತ್ತಿನ ಆದಾಯದಿಂದ ಕೆಲವು ಖರ್ಚುಗಳನ್ನು ಸಂದಾಯ ಮಾಡಲು ಮುತವಲ್ಲಿಯು ಹಕ್ಕುಳ್ಳವನಾಗಿರುವುದು.—ವಕ್ಫ್ ವಿಲೇಖದಲ್ಲಿ ಏನೇ ಇದ್ದರೂ, 25ನೇ ಪ್ರಕರಣದ ಮೇರೆಗೆ ಯಾವುವೇ ವಿವರಗಳನ್ನು, ದಸ್ತಾವೇಜುಗಳನ್ನು ಅಥವಾ ಪ್ರತಿಗಳನ್ನು ಅಥವಾ 32ನೇ ಪ್ರಕರಣದ ಮೇರೆಗೆ ಯಾವುವೇ ಲೆಕ್ಕಪತ್ರಗಳನ್ನು ಅಥವಾ ಮಂಡಲಿಗೆ ಅಗತ್ಯವಾದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಒದಗಿಸುವುದಕ್ಕೆ ತನಗೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅಥವಾ ಮಂಡಲಿಯ ನಿರ್ದೇಶಗಳನ್ನು ಕಾರ್ಯಗತಗೊಳಿಸಲು ತನಗೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ತನಗೆ ಯುಕ್ತವಾಗಿ ತಗುಲಿದ ಯಾವುವೇ ವೆಚ್ಚಗಳನ್ನು ಪ್ರತಿಯೊಬ್ಬ ಮುತವಲ್ಲಿಯು ವಕ್ಫ್ ಸ್ವತ್ತಿನ ಆದಾಯದಿಂದ ಸಂದಾಯ ಮಾಡಬಹುದು.

38. ಮುತವಲ್ಲಿಯು ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ ಬಾಕಿಯನ್ನು ಸಂದಾಯ ಮಾಡಲು ಮಂಡಲಿಯ ಅಧಿಕಾರ.—(1) ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಕೊಡಬೇಕಾದ ಯಾವುದೇ ಕಂದಾಯವನ್ನು, ಉಪಕರವನ್ನು, ಕರಗಳನ್ನು ಅಥವಾ ತೆರಿಗೆಗಳನ್ನು ಸಂದಾಯ ಮಾಡಲು ಮುತವಲ್ಲಿಯು ಇನಕಾರ ಮಾಡಿದಲ್ಲಿ ಅಥವಾ ಸಂದಾಯ ಮಾಡಲು ವಿಫಲನಾದಲ್ಲಿ, ಕೊಡಬೇಕಾದ ಬಾಕಿಯಲ್ಲಿ ಮಂಡಲಿಯುವಕ್ಫ್ ನಿಧಿಯಿಂದ ತೀರಿಸಬಹುದು ಮತ್ತು ಹಾಗೆ ಸಂದಾಯ ಮಾಡಿದ ಮೊಬಲಗನ್ನು ವಕ್ಫ್ ಸ್ವತ್ತಿನಿಂದ ವಸೂಲು ಮಾಡಬಹುದು ಮತ್ತು ಹಾಗೆ ಸಂದಾಯ ಮಾಡಿದ ಮೊಬಲಗಿನ ಶೇಕಡ ಹನ್ನೆರಡೂವರೆಗೆ ಮೀರದ ಹಾನಿ ಪರಿಹಾರವನ್ನು ಸಹ ವಸೂಲು ಮಾಡಬಹುದು.

(2) ಸಂಬಂಧಪಟ್ಟ ಮುತವಲ್ಲಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಅನಂತರ, ಮಂಡಲಿಯು ಕೊಟ್ಟ ಪ್ರಮಾಣ ಪತ್ರದ ಮೇಲೆ (1)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಬಾಕಿಯಾಗಿರುವ ಮೊಬಲಗನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

39. ಕಾಯ್ದಿಟ್ಟ ನಿಧಿಯ ಸ್ಥಾಪನೆ.—ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಕೊಡಬೇಕಾಗಿರುವ ಬಾಡಿಗೆಯನ್ನು ಮತ್ತು ಕಂದಾಯವನ್ನು, ಉಪಕರವನ್ನು, ಕರಗಳನ್ನು ಮತ್ತು ಶೆರಿಗೆಗಳನ್ನು ಸಂದಾಯ ಮಾಡುವುದಕ್ಕಾಗಿ, ವಕ್ಫ್ ಸ್ವತ್ತಿನ ದುರಸ್ತಿಯ ವೆಚ್ಚಗಳನ್ನು ತೀರಿಸುವುದಕ್ಕಾಗಿ ಮತ್ತು ವಕ್ಫ್ ಸ್ವತ್ತಿನ ಸಂರಕ್ಷಣೆಗಾಗಿ ಉಪಬಂಧವನ್ನು ಕಲ್ಪಿಸುವ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಆಲೋಚಿಸುವಂಥ ರೀತಿಯಲ್ಲಿ ವಕ್ಫ್ ಆದಾಯದಿಂದ ಒಂದು ಕಾಯ್ದಿಟ್ಟ ನಿಧಿಯನ್ನು ಸ್ಥಾಪಿಸಲು ಮತ್ತು ನಿರ್ವಹಿಸಿಕೊಂಡು ಬರಲು ಮಂಡಲಿಯು ನಿರ್ದೇಶಿಸಬಹುದು.

40. ಅವಧಿಯ ವಿಸ್ತರಣೆ.—ಹಾಗೆ ಮಾಡುವುದು ಅವಶ್ಯವೆಂದು ಮಂಡಲಿಗೆ ಮನದಟ್ಟಾದರೆ ಈ ಅಧಿನಿಯಮದ ಮೇರೆಗೆ ಮುತವಲ್ಲಿಯು ಮಾಡಬೇಕಾದ ಯಾವುದೇ ಕಾರ್ಯವನ್ನು ಅದು ಮಾಡಲು ಅವಧಿಯನ್ನು ವಿಸ್ತರಿಸಬಹುದು.

41. ದಂಡಗಳು.—(1) ಮುತವಲ್ಲಿಯು,

(ಕ) ವಕ್ಫ್‌ನ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಲು ;

(ಖ) ಈ ಅಧಿನಿಯಮವು ಅಗತ್ಯಪಡಿಸಿದ ವಿವರಗಳ ತಃಖ್ತೆಗಳನ್ನು ಅಥವಾ ಲೆಕ್ಕಪತ್ರಗಳನ್ನು ಅಥವಾ ವಿವರಣ ಪಟ್ಟಿಗಳನ್ನು ಒದಗಿಸಲು ;

(ಗ) ಮಂಡಲಿಯು ಅಗತ್ಯಪಡಿಸಿದ ಮಾಹಿತಿಯನ್ನು ಅಥವಾ ವಿವರಗಳನ್ನು ಒದಗಿಸಲು ;

(ಘ) ವಕ್ಫ್ ಸ್ವತ್ತುಗಳ, ಅವುಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ಅಥವಾ ದಾಖಲೆಗಳ ಅಥವಾ ವಿಲೇಖಗಳ ಮತ್ತು ದಸ್ತಾವೇಜುಗಳ ಪರಿಶೀಲನೆಗೆ ಅವಕಾಶ ಕೊಡಲು

(ಙ) ಮಂಡಲಿಯು ಅಥವಾ ನ್ಯಾಯಾಲಯವು ಆದೇಶ ಮಾಡಿದರೆ, ಯಾವುದೇ ವಕ್ಫ್ ಸ್ವತ್ತಿನ ಸ್ವಾಧೀನವನ್ನು ವಶಾವಣೆ ಮಾಡಲು ;

(ಚ) ಮಂಡಲಿಯ ನಿರ್ದೇಶನಗಳನ್ನು ಕಾರ್ಯಗತಗೊಳಿಸಲು ;

(ಛ) * * *

(ಜ) ಯಾವುದೇ ಸಾರ್ವಜನಿಕ ಬಾಕಿಗಳನ್ನು ತೀರಿಸಲು. ಅಥವಾ

(ಝ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅವನು ಮಾಡಬೇಕೆಂದು ಕಾನೂನು ಬದ್ಧವಾಗಿ ಅಗತ್ಯಪಡಿಸಲಾಗಿರುವ ಇತರ ಯಾವುದೇ ಕಾರ್ಯವನ್ನು ಮಾಡಲು, ವಿಫಲನಾದರೆ, ಹಾಗೆ ತಾನು ವಿಫಲನಾದುದಕ್ಕೆ ಯುಕ್ತ ಕಾರಣವಿದ್ದಿತೆಂದು ಅವನು ನ್ಯಾಯಾಲಯಕ್ಕೆ ಮನದಟ್ಟು ಮಾಡಿದ ಹೊರತು, ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅವನು ದಂಡನೀಯನಾಗತಕ್ಕದು.

(2) ಮಂಡಲಿಯು ಅಥವಾ ಈ ಬಗ್ಗೆ ಮಂಡಲಿಯಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯು ದೂರನ್ನು ಸಲ್ಲಿಸಿದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞಾನವನ್ನು ಯಾವ ನ್ಯಾಯಾಲಯವೂ ತೆಗೆದು ಕೊಳ್ಳತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದಲ್ಲಿ ಅಧಿವಿಚಾರಣೆಯನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಮೊದಲ ವರ್ಗದ ಮ್ಯಾಜಿಸ್ಟ್ರೇಟನ ನ್ಯಾಯಾಲಯದ ಕೆಳದರ್ಜೆಯ ಯಾವ ನ್ಯಾಯಾಲಯವೂ ಮಾಡತಕ್ಕದ್ದಲ್ಲ.

42. ಕೆಲವು ಸಂದರ್ಭಗಳಲ್ಲಿ ಮುತವಲ್ಲಿಗಳನ್ನು ನೇಮಿಸುವ ಅಧಿಕಾರ.—ವಕ್ಫ್‌ನ ಮುತವಲ್ಲಿಯ ಪದವು ಖಾಲಿಯಾದಾಗ ಮತ್ತು ವಕ್ಫ್‌ನ ವಿಲೇಖದ ನಿಬಂಧನೆಗಳ ಮೇರೆಗೆ ನೇಮಕ ಮಾಡಲು ಯಾವ ವ್ಯಕ್ತಿಯೂ ಇಲ್ಲದಿರುವಾಗ, ಅಥವಾ ಮುತವಲ್ಲಿಯಾಗಿ ಕೆಲಸ ಮಾಡಲು ಯಾವನೇ ವ್ಯಕ್ತಿಗೆ ಇರುವ ಹಕ್ಕು ವಿವಾದಕ್ಕೆ ಒಳಪಟ್ಟಿರುವಲ್ಲಿ, ಮಂಡಲಿಯು ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳ ಮೇಲೆ ಯಾವನೇ ವ್ಯಕ್ತಿಯನ್ನು ಮುತವಲ್ಲಿಯಾಗಿ ಕಾರ್ಯನಿರ್ವಹಿಸಲು ನೇಮಿಸಬಹುದು.

43. ಮುತವಲ್ಲಿಗಳನ್ನು ತೆಗೆದುಹಾಕುವುದು.—(1) ಇತರ ಯಾವುದೇ ಕಾನೂನಿನಲ್ಲಿ ಅಥವಾ ವಕ್ಫ್‌ನ ವಿಲೇಖದಲ್ಲಿ ಏನೇ ಇದ್ದರೂ ಮುತವಲ್ಲಿಯು,—

(ಕ) 41ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಒಂದು ಸಲಕ್ಕಿಂತ ಹೆಚ್ಚುಸಲ ಅಪರಾಧಿಯೆಂದು ನಿರ್ಣೀತನಾಗಿದ್ದರೆ ; ಅಥವಾ

(ಖ) ಅಪರಾಧಿಕ ನಂಬಿಕೆ ದ್ರೋಹದ ಅಪರಾಧಕ್ಕಾಗಿ ಅಥವಾ ನೈತಿಕ ಅಧಃಪತನಕ್ಕೆ ಸಂಬಂಧಿಸಿದ ಇತರ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ; ಅಥವಾ

(ಗ) ವಕ್ಫ್‌ನ ಸ್ವತ್ತುಗಳನ್ನು ದುರ್ವಿನಿಯೋಗ ಮಾಡಿದ್ದರೆ ಅಥವಾ ಅವುಗಳ ಬಗ್ಗೆ ಅನುಚಿತವಾಗಿ ವ್ಯವಹರಿಸಿದ್ದರೆ; ಅಥವಾ

(ಘ) ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಮುತವಲ್ಲಿಯ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥಗೊಳಿಸುವಂಥ ಇತರ ಮಾನಸಿಕ ಅಥವಾ ದೈಹಿಕ ನ್ಯೂನತೆಗೆ ಅಥವಾ ದುರ್ಬಲತೆಗೆ ಒಳಗಾಗಿದ್ದರೆ; ಅಥವಾ

(ಙ) 46ನೇ ಪ್ರಕರಣದ ಮೇರೆಗೆ ತಾನು ಸಂದಾಯ ಮಾಡಬೇಕಾದ ವಂತಿಗೆಯನ್ನು ಯುಕ್ತ ಕಾರಣವಿಲ್ಲದೆ ನಿರಂತರವಾಗಿ ಎರಡು ವರ್ಷಗಳವರೆಗೆ ಸಂದಾಯಮಾಡಲು ತಪ್ಪಿದರೆ ;

— ಅಂಥ ಮುತವಲ್ಲಿಯನ್ನು ಮಂಡಲಿಯು ಅವನ ಪದದಿಂದ ತೆಗೆದುಹಾಕಬಹುದು.

(2) ಯಾವುದೇ ವಕ್ಫ್ ಸ್ವತ್ತನ್ನು ವ್ಯವಸ್ಥಾಪನೆ ಮಾಡುವುದಕ್ಕಾಗಿ ಅಥವಾ ಅದರ ಆಡಳಿತವನ್ನು ನಿರ್ವಹಿಸುವುದಕ್ಕಾಗಿ ಮುತವಲ್ಲಿಯಾಗಿ ಕೆಲಸ ಮಾಡಲು ಮಂಡಲಿಯು ಅಥವಾ ನ್ಯಾಯಾಲಯವಲ್ಲದ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಸಮಿತಿಯನ್ನು ನೇಮಿಸಿರುವಲ್ಲಿ ಮತ್ತು ಮಂಡಲಿಯ ಅಭಿಪ್ರಾಯದಲ್ಲಿ, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ವಿಧಿಸಲಾದ ಕರ್ತವ್ಯವನ್ನು ನೆರವೇರಿಸಲು ಸಮಿತಿಯು ಅಸಮರ್ಥವಾಗಿದ್ದಲ್ಲಿ ಅಥವಾ ಆ ಕರ್ತವ್ಯ ನಿರ್ವಹಣೆಯಲ್ಲಿ ಪುನಃ ಪುನಃ ತಪ್ಪಿದಲ್ಲಿ ಅಥವಾ ತನ್ನ ಅಧಿಕಾರಗಳನ್ನು ಮೀರಿದಲ್ಲಿ ಅಥವಾ ದುರುಪಯೋಗ ಪಡಿಸಿಕೊಂಡಲ್ಲಿ, ಮಂಡಲಿಯು ಸಮಿತಿಯನ್ನು ರದ್ದುಗೊಳಿಸಬಹುದು ಮತ್ತು ವಕ್ಫ್ ಸ್ವತ್ತಿನ ಮುತವಲ್ಲಿಯಾಗಿ ಕೆಲಸ ಮಾಡಲು ಇತರ ಯಾವನೇ ವ್ಯಕ್ತಿಯನ್ನು ಅಥವಾ ಸಮಿತಿಯನ್ನು ನೇಮಿಸಬಹುದು.

(3) ಒಬ್ಬ ವ್ಯಕ್ತಿಯನ್ನು ಮುತವಲ್ಲಿಯ ಪದದಿಂದ ತೆಗೆದುಹಾಕುವುದು ವಕ್ಫ್ ಸ್ವತ್ತಿನ ಸಂಬಂಧದಲ್ಲಿ ಫಲಾನುಭವಿಯಾಗಿ ಅಥವಾ ಇತರ ಯಾವುದೇ ಸಾಮರ್ಥ್ಯದಲ್ಲಿ ಅವನ ವೈಯಕ್ತಿಕ ಹಕ್ಕುಗಳು ಯಾವುವಾದರೂ ಇದ್ದರೆ, ಅಥವಾ ಸಜ್ಜಾದಾನಷೀನ್ ಆಗಿ ಅವನ ಹಕ್ಕುಗಳು ಯಾವುವಾದರೂ ಇದ್ದರೆ, ಅವುಗಳನ್ನು ಬಾಧಿಸತಕ್ಕದ್ದಲ್ಲವೆಂದು ಈ ಮೂಲಕ ಸಂದೇಹಗಳ ನಿವಾರಣೆಗಾಗಿ ಘೋಷಿಸಲಾಗಿದೆ.

(4) ನಿಯಮಿಸಲಾದ ರೀತಿಯಲ್ಲಿ ಈ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸಿದ ಹೊರತು ಮತ್ತು ಮಂಡಲಿಯು ಸದಸ್ಯರ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆಯಿಲ್ಲದ ಬಹುಮತದಿಂದ ತೀರ್ಮಾನಿತವಾದ ಹೊರತು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ಯಾವ ಕ್ರಮವನ್ನೂ ತೆಗೆದುಕೊಳ್ಳತಕ್ಕದ್ದಲ್ಲ.

(4-ಕ) (1)ನೇ ಉಪಪ್ರಕರಣದ (ಗ) ದಿಂದ (ಙ) ವರೆಗಿನ ಖಂಡಗಳ ಪೈಕಿ ಯಾವುದೇ ಖಂಡದ ಮೇರೆಗೆ, ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಮುತವಲ್ಲಿಯು, ಅವನು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ, ಆ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(5) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮುತವಲ್ಲಿಯನ್ನು ಅವನ ಪದದಿಂದ ತೆಗೆದುಹಾಕಿದಲ್ಲಿ, ವಕ್ಫ್ ಸ್ವತ್ತಿನ ಸ್ವಾಧೀನತೆಯನ್ನು ಮಂಡಲಿಗೆ ಅಥವಾ ಈ ಬಗ್ಗೆ ಕ್ರಮಬದ್ಧವಾಗಿ ಪ್ರಾಧಿಕೃತನಾದ ಅದರ ಯಾವನೇ ಅಧಿಕಾರಿಗೆ ಅಥವಾ ವಕ್ಫ್ ಸ್ವತ್ತಿನ ಮುತವಲ್ಲಿಯಾಗಿ ಕೆಲಸ ಮಾಡಲು ನೇಮಿತನಾಗಿರುವ ಯಾವನೇ ವ್ಯಕ್ತಿಗೆ ಅಥವಾ ಸಮಿತಿಗೆ ವಶಾವಣೆ ಮಾಡತಕ್ಕದೆಂದು ಆದೇಶದ ಮೂಲಕ

ಮಂಡಲಿಯು ನಿರ್ದೇಶಿಸಬಹುದು, ಮತ್ತು ಮಂಡಲಿಯು ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂಬುದಾಗಿ ಭಾವಿಸತಕ್ಕದು ಮತ್ತು ಸಿವಿಲ್ ನ್ಯಾಯಾಲಯವು ಆ ಡಿಕ್ರಿಯನ್ನು ತಾನೇ ಮಾಡಿದ್ದರೆ ಹೇಗೋ ಹಾಗೆ ಅದನ್ನು ಜಾರಿಗೊಳಿಸತಕ್ಕದು.

(6) ಈ ಪ್ರಕರಣದ ಮೇರೆಗೆ ತನ್ನ ಪದದಿಂದ ತೆಗೆದು ಹಾಕಲ್ಪಟ್ಟ ವಕ್ಫಿನ ಮುತವಲ್ಲಿಯು, ಹಾಗೆ ತೆಗೆದುಹಾಕಲಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಆ ವಕ್ಫಿನ ಮುತವಲ್ಲಿಯಾಗಿ ನೇಮಿತನಾಗಲು ಅರ್ಹನಾಗಿರತಕ್ಕದ್ದಲ್ಲ.

43-ಕ. ಮಂಡಲಿಯು ಕೆಲವು ವಕ್ಫ್‌ಗಳ ನೇರ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದು.—(1) 42ನೇ ಪ್ರಕರಣದ ಮೇರೆಗೆ ಅಥವಾ 43ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಕ್ಫಿನ ಮುತವಲ್ಲಿಯಾಗಿ ನೇಮಿತನಾಗಲು ಯಾವ ಯೋಗ್ಯ ವ್ಯಕ್ತಿಯೂ ದೊರೆಯದಿದ್ದಲ್ಲಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಒಟ್ಟು ಐದು ವರ್ಷಗಳಿಗೆ ಮೀರದಂತೆ ಯಾವುದೇ ಅವಧಿಯವರೆಗೆ ಅಥವಾ ಅವಧಿಗಳವರೆಗೆ ವಕ್ಫಿನ ನೇರ ವ್ಯವಸ್ಥಾಪನೆಯನ್ನು ಮಂಡಲಿಯು ವಹಿಸಿಕೊಳ್ಳಬಹುದು.

(2) 33ನೇ ಪ್ರಕರಣದಲ್ಲಿ ಏನೇ ಇದ್ದರೂ, ಮಂಡಲಿಯ ನೇರ ವ್ಯವಸ್ಥಾಪನೆಯಲ್ಲಿರುವ ಪ್ರತಿಯೊಂದು ವಕ್ಫಿನ ಲೆಕ್ಕಪತ್ರಗಳನ್ನು, ಚಾರ್ಟರ್ಡ್ ಅಕೌಂಟೆಂಟರ ಅಧಿನಿಯಮ, 1949ರ ಅರ್ಥವ್ಯಾಪ್ತಿಯೊಳಗೆ ವೃತ್ತಿಯನ್ನು ನಡೆಸುತ್ತಿರುವ ಚಾರ್ಟರ್ಡ್ ಅಕೌಂಟೆಂಟರ ಪೈಕಿ, ಮಂಡಲಿಯು ನೇಮಿಸುವ ಲೆಕ್ಕಪರಿಶೋಧಕನು ಪ್ರತಿವರ್ಷವೂ ಪರಿಶೋಧಿಸತಕ್ಕದು.

44. ವಿಚಾರಣೆಗಾಗಿ ಅರ್ಜಿ.—ವಕ್ಫಿನಲ್ಲಿ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ವಕ್ಫಿನ ಆಡಳಿತಕ್ಕೆ ಸಂಬಂಧಿಸಿದ ವಿಚಾರಣೆಯನು ನಡೆಸುವುದಕ್ಕಾಗಿ ಶಪಥ ಪತ್ರದ ಮೂಲಕ ಸಮರ್ಥಿತವಾದ ಅರ್ಜಿಯನ್ನು ಮಂಡಲಿಗೆ ಸಲ್ಲಿಸಬಹುದು, ಮತ್ತು ವಕ್ಫ್ ವ್ಯವಹಾರಗಳನ್ನು ಅವ್ಯವಸ್ಥಿತವಾಗಿ ನಡೆಸಲಾಗುತ್ತಿದೆಯೆಂದು ನಂಬಲು ಯುಕ್ತ ಕಾರಣಗಳಿವೆ ಎಂದು ಮಂಡಲಿಗೆ ಮನದಟ್ಟಾದರೆ, ಆ ಬಗ್ಗೆ ತಾನು ಸೂಕ್ತವೆಂದು ಆಲೋಚಿಸುವಂಥ ಕ್ರಮವನ್ನು ಅದು ಕೈಕೊಳ್ಳಬಹುದು.

45. ಮಂಡಲಿಯಿಂದ ವಿಚಾರಣೆ.—(1) 44ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅಥವಾ ತಾನಾಗಿಯೇ ಆಗಲಿ ಮಂಡಲಿಯು—

(ಕ) ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸಬಹುದು ; ಅಥವಾ

(ಖ) ವಕ್ಫಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸುವಂತೆ ಈ ಬಗ್ಗೆ ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ಕ್ರಮವನ್ನು ತೆಗೆದುಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗಿನ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಗಳಿಗಾಗಿ, ಮಂಡಲಿಯು ಅಥವಾ ಆ ಬಗ್ಗೆ ಅದರಿಂದ ಅಧಿಕೃತನಾದ ಯಾವನೇ ವ್ಯಕ್ತಿಯು, ಸಾಕ್ಷಿದಾರರು ಹಾಜರಾಗುವಂತೆ ಮತ್ತು ದಸ್ತಾವೇಜುಗಳನ್ನು ಹಾಜರು ಪಡಿಸುವಂತೆ ಒತ್ತಾಯಪಡಿಸುವುದಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನೇ ಹೊಂದಿರತಕ್ಕದು.

## ಅಧ್ಯಾಯ—VI

### ಮಂಡಲಿಯ ಹಣಕಾಸು

46. ಮಂಡಲಿಗೆ ಸಂದಾಯ ಮಾಡಬೇಕಾದ ವಾರ್ಷಿಕ ವಂತಿಗೆಗಳು.— (1) ರಾಜ್ಯ ಸರ್ಕಾರದ ಮಂಜೂರಾತಿಗೊಳಪಟ್ಟು, ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ, ಆ ರಾಜ್ಯದಲ್ಲಿ ವಕ್ಫಿಗೆ ಬರುವ ನಿವ್ವಳ ವಾರ್ಷಿಕ ಆದಾಯದ ಶೇಕಡ ಆರನ್ನು ಮೀರದಂಥ ವಂತಿಗೆಯನ್ನು–ಪ್ರತಿಯೊಂದು ವಕ್ಫಿನ ಮುತವಲ್ಲಿಯು ಮಂಡಲಿಗೆ ಪ್ರತಿ ವರ್ಷ ಸಂದಾಯ ಮಾಡತಕ್ಕದು :

ಪರಂತು ಯಾವ ವಕ್ಫಿನ ನಿವ್ವಳ ವಾರ್ಷಿಕ ಆದಾಯವು ಒಂದು ನೂರು ರೂಪಾಯಿಗಳಿಗೆ ಮೀರುವುದಿಲ್ಲವೋ, ಆ ವಕ್ಫಿನ ಮುತವಲ್ಲಿಯಿಂದ ಅಂಥ ಯಾವ ವಂತಿಗೆಯೂ ಸಂದಾಯವಾಗತಕ್ಕದ್ದಲ್ಲ.

(2) ಯಾವುದೇ ನಿರ್ದಿಷ್ಟ ವಕ್ಫಿನ ಸಂಬಂಧದಲ್ಲಿ, ಮಂಡಲಿಯು ತಾನು ಸೂಕ್ತವೆಂದು ಆಲೋಚಿಸುವಂಥ ಕಾಲದವರೆಗೆ ಅಂಥ ವಂತಿಗೆಯನ್ನು ಕಡಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

(3) (1)ನೇ ಉಪ ಪ್ರಕರಣದ ಮೇರೆಗೆ ತಾನು ಸಂದಾಯ ಮಾಡಬೇಕಾದ ವಂತಿಗೆಗಳನ್ನು, ವಕ್ಫಿನಿಂದ ಯಾವುದೇ ಆರ್ಥಿಕ ಅಥವಾ ಇತರ ಭೌತಿಕ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳ ಬೇರೆ ಬೇರೆ ವ್ಯಕ್ತಿಗಳಿಂದ ವಕ್ಫಿನ ಮುತವಲ್ಲಿಯು ವಸೂಲು ಮಾಡಬಹುದು, ಆದರೆ ಅಂಥ ವ್ಯಕ್ತಿಗಳಲ್ಲಿ ಯಾವನೊಬ್ಬ ವ್ಯಕ್ತಿಯಿಂದ ವಸೂಲು ಮಾಡಬಹುದಾದ ಮೊತ್ತವು ಅಂಥ ವ್ಯಕ್ತಿಯು ಸ್ವೀಕರಿಸಬಹುದಾದ ಪ್ರಯೋಜನಗಳ ಮೌಲ್ಯವು ಹಾಗು ವಕ್ಫಿನ ಸಮಗ್ರ ನಿವ್ವಳ ವಾರ್ಷಿಕ ಆದಾಯವು ಯಾವ ದಾಮಾಷಾ ಪ್ರಮಾಣದಲ್ಲಿ ಇವೆಯೋ ಅದೇ ಪ್ರಮಾಣದ ದಾಮಾಷಾದಲ್ಲಿ ಅಂಥ ಮೊಬಲಗು ಹಾಗು ಸಂದಾಯ ಮಾಡಬೇಕಾದ ಒಟ್ಟು ವಂತಿಗೆಯು ಇರುವಂಥ ಮೊಬಲಗನ್ನು ಮೀರತಕ್ಕದ್ದಲ್ಲ ;

ಪರಂತು ಈ ಅಧಿನಿಯಮದ ಮೇರೆಗಿನ ಬಾಕಿಯಂತೆ ಸಂದಾಯ ಮಾಡಬೇಕಾದ ಮೊಬಲಗಿಗಿಂತ ಹೆಚ್ಚಾಗಿ, ಮತ್ತು ವಕ್ಫಿನ ವಿಲೇಖದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗಿಗಿಂತ ಹೆಚ್ಚಾಗಿ, (1)ನೇ ಉಪಪ್ರಕರಣದ ಮೇರೆಗಿನ ವಂತಿಗೆಯು ರೂಪದಲ್ಲಿ ವಕ್ಫಿನ ಯಾವುದೇ ಆದಾಯವು ದೊರೆತರೆ, ಆ ವಂತಿಗೆಯನ್ನು ಅಂಥ ಆದಾಯದಿಂದ ಸಂದಾಯ ಮಾಡತಕ್ಕದು.

(4) ವಕ್ಫಿನ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ವಂತಿಗೆಯು, ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಕೊಡಬೇಕಾದ ಯಾವುವೇ ಬಾಕಿಗಳ ಅಥವಾ ವಕ್ಫ್ ಸ್ವತ್ತಿನ ಅಥವಾ ಅದರ ಆದಾಯದ ಮೇಲಣ ಇತರ ಯಾವುದೇ ಶಾಸನಬದ್ಧವಾದ ಮೊದಲ ಚಾರ್ಜಿನ ಪೂರ್ವ ಸಂದಾಯಕ್ಕೆ ಒಳಪಟ್ಟು, ವಕ್ಫಿನ ಆದಾಯದ ಮೇಲೆ ಮೊದಲ ಚಾರ್ಜ್ ಆಗಿರತಕ್ಕದು ಮತ್ತು ಸಂಬಂಧಪಟ್ಟ ಮುತವಲ್ಲಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಅನಂತರ ಮಂಡಲಿಯು ಕೊಟ್ಟ ಪ್ರಮಾಣಪತ್ರದ ಮೇಲೆ, ಅದು ಭೂ ಕಂದಾಯದ ಬಾಕಿಯಂತೆ ವಸೂಲೀಯವಾಗಿರತಕ್ಕದು.

(5) ಮುತವಲ್ಲಿಯು ವಕ್ಫಿನ ಆದಾಯವನ್ನು ವಸೂಲ್ಮಾಡಿದರೆ ಮತ್ತು ಅಂಥ ವಂತಿಗೆಯನ್ನು ಸಂದಾಯ ಮಾಡಲು ಇನಕಾರ ಮಾಡಿದರೆ ಅಥವಾ ಸಂದಾಯ ಮಾಡದಿದ್ದರೆ, ಅವನು ಅಂಥ ವಂತಿಗೆಗೆ ವೈಯುಕ್ತಿಕವಾಗಿ ಸಹ ಹೊಣೆಗಾರನಾಗಿರತಕ್ಕದು ಮತ್ತು ಅದನ್ನು ಮೇಲೆ ಹೇಳಿದ ರೀತಿಯಲ್ಲಿ ಅವನಿಂದ ಅಥವಾ ಅವನ ಸ್ವತ್ತಿನಿಂದ ವಸೂಲು ಮಾಡಬಹುದು.

47. ಸಾಲ ಪಡೆಯಲು ಮಂಡಲಿಗಿರುವ ಅಧಿಕಾರ.—ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಮೊಬಲಗನ್ನು ಮತ್ತು ಅಂಥ ಷರತ್ತುಗಳ ಹಾಗು ನಿರ್ಬಂಧಗಳ ಮೇಲೆ, ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯನು ಪಡೆದು ಮಂಡಲಿಯು ಸಾಲವಾಗಿ ಪಡೆಯಬಹುದು ಮತ್ತು ತಾನು ಸಾಲವಾಗಿ ಪಡೆದ ಮೊಬಲಗನ್ನು ಸಾಲದ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಅನುಸಾರವಾಗಿ ಆ ಸಂಬಂಧದಲ್ಲಿ ಬಾಕಿಯಾಗಿರುವ ಯಾವುದೇ ಬಡ್ಡಿ ಯೊಡನೆ ಅಥವಾ ಯಾವುವೇ ಖರ್ಚುಗಳೊಡನೆ ಮಂಡಲಿಯು ಮರುಸಂದಾಯ ಮಾಡತಕ್ಕದು.

48. ವಕ್ಫ್ ನಿಧಿ.—(1) ಈ ಅಧಿನಿಯಮದ ಮೇರೆಗೆ ಮಂಡಲಿಯು ಸ್ವೀಕರಿಸುವ ಅಥವಾ ವಸೂಲು ಮಾಡುವ ಎಲ್ಲ ಹಣ ಮತ್ತು ದೇಣಿಗೆಗಳಾಗಿ, ಉಪಕಾರ ಧನಗಳಾಗಿ ಅಥವಾ ಅನುದಾನಗಳಾಗಿ ಮಂಡಲಿಯು ಸ್ವೀಕರಿಸುವ ಇತರ ಎಲ್ಲ ಹಣವು ವಕ್ಫ್ ನಿಧಿ ಎಂದು ಕರೆಯಲಾಗುವ ನಿಧಿಯಾಗಿರತಕ್ಕದು.

(1ಕ) ದೇಣಿಗೆಗಳಾಗಿ, ಉಪಕಾರ ಧನಗಳಾಗಿ ಮತ್ತು ಅನುದಾನಗಳಾಗಿ ಮಂಡಲಿಯು ಸ್ವೀಕರಿಸುವ ಎಲ್ಲ ಹಣವನ್ನು ಪ್ರತ್ಯೇಕ ಉಪ-ಶೀರ್ಷಿಕೆಯಲ್ಲಿ ಠೇವಣಿ ಇಡತಕ್ಕದು ಮತ್ತು ಆ ಬಗ್ಗೆ ಲೆಕ್ಕವನ್ನು ಕೊಡತಕ್ಕದು.

(2) ಈ ಬಗ್ಗೆ ರಾಜ್ಯ ಸರ್ಕಾರವು ಮಾಡಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ವಕ್ಫ್ ನಿಧಿಯು ಮಂಡಲಿಯ ನಿಯಂತ್ರಣದಲ್ಲಿರತಕ್ಕದು.

(3) ವಕ್ಫ್ ನಿಧಿಯನ್ನು—

(ಕ) 47ನೇ ಪ್ರಕರಣದ ಮೇರೆಗೆ ತೆಗೆದುಕೊಳ್ಳಲಾದ್ದ ಯಾವುದೇ ಸಾಲದ ಮರುಸಂದಾಯಕ್ಕೆ ಮತ್ತು ಅದರ ಮೇಲಣ ಬಡ್ಡಿಯ ಸಂದಾಯಕ್ಕೆ;

(ಖ) ವಕ್ಫ್ ನಿಧಿಯ ಮತ್ತು ವಕ್ಫ್‌ಗಳ ಲೆಕ್ಕಪತ್ರಗಳ ಪರಿಶೋಧನೆಯ ಖರ್ಚನ್ನು ಸಂದಾಯ ಮಾಡುವುದಕ್ಕೆ ;

(ಗ) ಮಂಡಲಿಯ ಕಾರ್ಯದರ್ಶಿಯ ಮತ್ತು ಸಿಬ್ಬಂದಿಯ ಸಂಬಳವನ್ನು ಮತ್ತು ಭತ್ಯಗಳನ್ನು ಸಂದಾಯ ಮಾಡುವುದಕ್ಕೆ ;

(ಘ) ಮಂಡಲಿಯ ಅಧ್ಯಕ್ಷನ, ಸದಸ್ಯರ, ಕಾರ್ಯದರ್ಶಿಯ ಮತ್ತು ಸಿಬ್ಬಂದಿಯ ಪ್ರಯಾಣ ಭತ್ಯವನ್ನು ಸಂದಾಯ ಮಾಡುವುದಕ್ಕೆ ;

(ಙ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ವಿಧಿಸಲಾದ ಕರ್ತವ್ಯಗಳನ್ನು ನೆರವೇರಿಸುವಲ್ಲಿ, ಮತ್ತು ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮಂಡಲಿಗೆ ತಗಲುವ ಎಲ್ಲ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ,

—ವಿನಿಯೋಗಿಸತಕ್ಕದು.

(4) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ವೆಚ್ಚವನ್ನು ಭರಿಸಿದ ಅನಂತರ ಯಾವುದೇ ಶಿಲ್ಕು ಉಳಿದರೆ, ವಕ್ಫ್ ಸ್ವತ್ತುಗಳ ಪರಿರಕ್ಷಣೆಗಾಗಿ ಮತ್ತು ರಕ್ಷಣೆಗಾಗಿ ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಅಂಥ ಶಿಲ್ಕಿನ ಯಾವುದೇ ಭಾಗವನ್ನು ಉಪಯೋಗಿಸಬಹುದು.

49. ಮಂಡಲಿಯ ಆಯವ್ಯಯ ಪತ್ರ.—ಮುಂದಿನ ಆರ್ಥಿಕ ವರ್ಷದ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ತೋರಿಸುವ ಆ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು, ಮಂಡಲಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಪ್ರತಿ ವರ್ಷವೂ ತಯಾರಿಸತಕ್ಕದು ಮತ್ತು ಅದರ ಒಂದು ಪ್ರತಿಯನ್ನು ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕದು.

50. ಮಂಡಲಿಯ ಲೆಕ್ಕಪತ್ರಗಳು.—ತನ್ನ ಲೆಕ್ಕಪತ್ರಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಲೆಕ್ಕದ ಪುಸ್ತಕಗಳನ್ನು ಮತ್ತು ಇತರ ಪುಸ್ತಕಗಳನ್ನು ಇಟ್ಟುಕೊಂಡು ಬರುವಂತೆ ಮಂಡಲಿಯು ಮಾಡತಕ್ಕದು.

51. ಮಂಡಲಿಯ ಲೆಕ್ಕಪತ್ರಗಳ ಪರಿಶೋಧನೆ.—(1) ರಾಜ್ಯ ಸರ್ಕಾರವು ನೇಮಿಸಬಹುದಾದಂಥ ಲೆಕ್ಕಪರಿಶೋಧಕನು ಮಂಡಲಿಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷ ಪರಿಶೋಧಿಸತಕ್ಕದು ಮತ್ತು ಪರೀಕ್ಷಿಸತಕ್ಕದು.

(2) ಲೆಕ್ಕ ಪರಿಶೋಧಕನು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸ ತಕ್ಕದು ಮತ್ತು ಲೆಕ್ಕಪರಿಶೋಧಕನ ವರದಿಯು ಅಕ್ರಮವಾದ ಕಾನೂನು ಬಾಹಿರವಾದ ಅಥವಾ ಅನುಚಿತವಾದ ವೆಚ್ಚದ ಎಲ್ಲ ಸಂದರ್ಭಗಳನ್ನು ಅಥವಾ ಹಣವನ್ನು ಅಥವಾ ಇತರ ಸ್ವತ್ತನ್ನು ವಸೂಲು ಮಾಡಲು ನಿರ್ಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ವಿಫಲವಾದ ಎಲ್ಲ ಸಂದರ್ಭಗಳನ್ನು ಮತ್ತು ವರದಿ ಮಾಡುವುದು ಅವಶ್ಯವೆಂದು ಲೆಕ್ಕಪರಿಶೋಧಕನು ಪರ್ಯಾಲೋಚಿಸುವಂಥ ಇತರ ಯಾವುದೇ ವಿಷಯವನ್ನು ಇತರ ವಿಷಯಗಳೊಡನೆ ನಿರ್ದಿಷ್ಟಪಡಿಸತಕ್ಕದು, ಮತ್ತು ಅಂಥ ವೆಚ್ಚಕ್ಕೆ ಅಥವಾ ವಿಫಲತೆಗೆ ಜವಾಬ್ದಾರನಾಗಿರುವವನೆಂದು ಲೆಕ್ಕಪರಿಶೋಧಕನು ಅಭಿಪ್ರಾಯಪಡುವ ಯಾವನೇ ವ್ಯಕ್ತಿಯ ಹೆಸರು ಸಹ ಆ ವರದಿಯಲ್ಲಿ ಇರತಕ್ಕದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ ಅಂಥ ವೆಚ್ಚದ ಅಥವಾ ನಷ್ಟದ ಮೊಬಲಗನ್ನು ಅಂಥ ವ್ಯಕ್ತಿಯಿಂದ ಬರಬೇಕಾದ ಬಾಕಿ ಎಂದು ಲೆಕ್ಕಪರಿಶೋಧಕನು ಪ್ರಮಾಣೀಕರಿಸತಕ್ಕದು.

(3) ಲೆಕ್ಕಗಳ ಪರಿಶೋಧನೆಯ ಖರ್ಚನ್ನು ವಕ್ಫ್ ನಿಧಿಯಿಂದ ಸಂದಾಯ ಮಾಡತಕ್ಕದು.

52. ಲೆಕ್ಕಪರಿಶೋಧಕನ ವರದಿಯ ಮೇಲೆ ರಾಜ್ಯ ಸರ್ಕಾರವು ಆದೇಶಗಳನ್ನು ಮಾಡುವುದು.—ರಾಜ್ಯಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರೀಕ್ಷಿಸತಕ್ಕದು. ಮತ್ತು ಅದರಲ್ಲಿ ನಮೂದಿಸಲಾಗಿರುವ ಯಾವುದೇ ವಿಷಯದ ಬಗ್ಗೆ ಯಾವನೇ ವ್ಯಕ್ತಿಯಿಂದ ವಿವರಣೆಯನ್ನು ತರಿಸಿಕೊಳ್ಳಬಹುದು ಮತ್ತು ಆ ವರದಿಯ ಮೇಲೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶಗಳನ್ನು ಮಾಡತಕ್ಕದು.

53. ಬರಬೇಕಾಗಿದೆಯೆಂದು ಪ್ರಮಾಣೀಕರಿಸಲಾಗಿರುವ ಮೊಬಲಗುಗಳು ಭೂ ಕಂದಾಯದ ಬಾಕಿಯಂತೆ ವಸೂಲೀಯವಾಗಿರುವುದು.—(1) 51ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನು ಕೊಟ್ಟ ವರದಿಯಲ್ಲಿ ಯಾವನೇ ವ್ಯಕ್ತಿಯಿಂದ ಬರಬೇಕಾಗಿದೆಯೆಂದು ಪ್ರಮಾಣೀಕರಿಸಲಾಗಿರುವ ಪ್ರತಿಯೊಂದು ಮೊಬಲಗನ್ನು, 52ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ಆದೇಶದಿಂದ ಅಂಥ ಪ್ರಮಾಣ ಪತ್ರವನ್ನು ಮಾರ್ಪಾಟು ಮಾಡಿದ ಅಥವಾ ರದ್ದುಪಡಿಸಿದ ಹೊರತು, ಮತ್ತು ಮಾರ್ಪಾಟಾದ ಪ್ರಮಾಣಪತ್ರದ ಮೇರೆಗೆ ಬರಬೇಕಾಗಿರುವ ಪ್ರತಿಯೊಂದು ಮೊಬಲಗನ್ನು, ರಾಜ್ಯ ಸರ್ಕಾರವು ಈ ಬಗ್ಗೆ ಹೊರಡಿಸಿದ ಮಾಗಣಿ ನೋಟೀಸು ಜಾರಿಯಾದ ದಿನಾಂಕದ ತರುವಾಯದ ಅರವತ್ತು ದಿನಗಳೊಳಗೆ, ಅಂಥ ವ್ಯಕ್ತಿಯು ಸಂದಾಯ ಮಾಡತಕ್ಕದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ಸಂದಾಯವನ್ನು ಮಾಡದಿದ್ದರೆ, ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಅನಂತರ ಮಂಡಲಿಯು ಕೊಟ್ಟ ಪ್ರಮಾಣಪತ್ರದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು, ಭೂ ಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ವಸೂಲು ಮಾಡಬಹುದು.

54. [ನಿರಸಿತ]

## ಅಧ್ಯಾಯ—VII

### ನ್ಯಾಯಿಕ ವ್ಯವಹರಣೆಗಳು

55. ಸಿವಿಲ್ ಪ್ರಕ್ರಿಯಾ ಸಂಹಿತೆಯ 92ನೇ ಪ್ರಕರಣದ ಮೇರೆಗೆ ದಾವೆಗಳನ್ನು ಹೂಡುವುದು.—(1) ಯಾವುದೇ ವಕ್ಫ್‌ಗೆ ಸಂಬಂಧಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 92ನೇ ಪ್ರಕರಣದಲ್ಲಿ ನಮೂದಿಸಲಾದ ಪರಿಹಾರಗಳ ಪೈಕಿ ಯಾವುದನ್ನಾದರೂ ಪಡೆಯುವುದಕ್ಕಾಗಿ, ಆ ಪ್ರಕರಣದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ ಅದರಲ್ಲಿ ಉಲ್ಲೇಖಿತವಾದ ಸಮ್ಮತಿಯನ್ನು ಪಡೆಯದೆಯೇ ಮಂಡಲಿಯು ದಾವೆಯನ್ನು ಹೂಡಬಹುದು.

(2) ಯಾವುದೇ ವಕ್ಫ್‌ಗೆ ಸಂಬಂಧಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 92ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಪರಿಹಾರಗಳ ಪೈಕಿ ಯಾವುದೇ ಪರಿಹಾರವನ್ನು ಪಡೆಯುವುದಕ್ಕಾಗಿ, ಮಂಡಲಿಯ ಹೊರತಾಗಿ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರಿಯು ಮಂಡಲಿಯ ಲಿಖಿತ ಸಮ್ಮತಿಯನ್ನು ಪಡೆಯದೆ ಯಾವ ದಾವೆಯನ್ನೂ ಹೂಡತಕ್ಕುದಲ್ಲ ಮತ್ತು ಅಂಥ ಯಾವುದೇ ದಾವೆಯನ್ನು ಹೂಡುವುದಕ್ಕೆ, ಆ ಪ್ರಕರಣದಲ್ಲಿ ಏನೇ ಇದ್ದರೂ, ಅದರಲ್ಲಿ ಉಲ್ಲೇಖಿತವಾದ ಸಮ್ಮತಿಯನ್ನು ಪಡೆಯುವುದು ಅವಶ್ಯವಾಗತಕ್ಕುದಲ್ಲ:

ಪರಂತು, ಮಂಡಲಿಯ ವಿರುದ್ಧವಾಗಿ ಹೂಡಿದ ಯಾವುದೇ ದಾವೆಯ ಸಂಬಂಧದಲ್ಲಿ ಈ ಉಪಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕುದಲ್ಲ.

56. ಮಂಡಲಿಯ ವಿರುದ್ಧವಾಗಿ ಪಕ್ಷಕಾರರು ದಾವೆಗಳ ನೋಟೀಸನ್ನು ಕೊಡುವುದು.—ವ್ಯಾಜ್ಯ ಕಾರಣವನ್ನು, ವಾದಿಯ ಹೆಸರನ್ನು, ವಿವರಗಳನ್ನು ಮತ್ತು ವಾಸ ಸ್ಥಳವನ್ನು ಹಾಗು ಅವನ ಕ್ಲೇಮು ಮಾಡುವ ಪರಿಹಾರವನ್ನು ತಿಳಿಸಿ ಲಿಖಿತ ನೋಟೀಸನ್ನು ಮಂಡಲಿಗೆ ತಲುಪಿಸಲಾದ ಅಥವಾ ಅದರ ಕಚೇರಿಯಲ್ಲಿ ಇಡಲಾದ ಅನಂತರದ ಮುಂದಿನ ಎರಡು ತಿಂಗಳುಗಳ ಅವಧಿಯು ಮುಗಿಯುವವರೆಗೆ ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ಮಾಡಿದ ಯಾವುವೇ ನಿಯಮಗಳಿಗೆ ಅನುಸಾರವಾಗಿ ಮಾಡಬೇಕೆಂದು ತಾತ್ಪರ್ಯವಾಗುವ ಯಾವುವೇ ಕಾರ್ಯಕ್ಕೆ ಸಂಬಂಧಿಸಿ ಮಂಡಲಿಯ ವಿರುದ್ಧವಾಗಿ ಯಾವ ದಾವೆಯನ್ನೂ ಹೂಡತಕ್ಕುದಲ್ಲ, ಮತ್ತು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಅಥವಾ ಇಡಲಾಗಿದೆ ಎಂಬ ವಿವರಣೆಯನ್ನು ವಾದಪತ್ರವು ಒಳಗೊಂಡಿರತಕ್ಕುದು.

57. ದಾವೆ, ಇತ್ಯಾದಿಗಳ ಬಗ್ಗೆ ನ್ಯಾಯಾಲಯವು ನೋಟೀಸು ಕೊಡುವುದು.—(1) ಸ್ವತ್ತಿನ ಸ್ವಾಮ್ಯಕ್ಕೆ ಅಥವಾ ಮುತವಲ್ಲಿಯ ಹಕ್ಕಿಗೆ ಸಂಬಂಧಪಟ್ಟ ಪ್ರತಿಯೊಂದು ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಅಂಥ ದಾವೆಯನ್ನು ಅಥವಾ ವ್ಯವಹರಣೆಯನು ಹೂಡುವ ಪಕ್ಷಕಾರನ ಖರ್ಚಿನಲ್ಲಿ ನ್ಯಾಯಾಲಯವು ಮಂಡಲಿಗೆ ನೋಟೀಸನ್ನು ಕೊಡತಕ್ಕುದು.

(2) ಸಿವಿಲ್ ನ್ಯಾಯಾಲಯದ ಡಿಕ್ರಿಯ ಅಮಲ್ಜಾರಿಯಲ್ಲಿ ಅಥವಾ ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಬರಬೇಕಾಗಿರುವ ಯಾವುದೇ ಕಂದಾಯದ, ಉಪಕರದ, ಕರಗಳ ಅಥವಾ ತೆರಿಗೆಗಳ ವಸೂಲಿಗಾಗಿ ಯಾವುದೇ ವಕ್ಫ್ ಸ್ವತ್ತನು ಮಾರಾಟಕ್ಕಾಗಿ ಅಧಿಸೂಚಿಸಿದಾಗ, ಯಾರ ಆದೇಶದ ಮೇರೆಗೆ ಮಾರಾಟವನ್ನು ಅಧಿಸೂಚಿಸಲಾಗಿದೆಯೋ ಅಂಥ ನ್ಯಾಯಾಲಯವು, ಕಲೆಕ್ಟರನು ಅಥವಾ ಇತರ ವ್ಯಕ್ತಿಯು ಮಂಡಲಿಗೆ ನೋಟೀಸನ್ನು ಕೊಡತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಡದಿರುವಲ್ಲಿ, ಆ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಮಾಡಿದ ಯಾವುದೇ ಡಿಕ್ರಿಯು ಅಥವಾ ಆದೇಶವು, ಅಂಥ ದಾವೆಯ ಅಥವಾ ವ್ಯವಹರಣೆಯ ಬಗ್ಗೆ ತನಗೆ ತಿಳಿದು ಬಂದ ಒಂದು ತಿಂಗಳೊಳಗೆ ಮಂಡಲಿಯು ಈ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದರೆ, ಶೂನ್ಯವಾಗಿದೆಯೆಂದು ಘೋಷಿಸತಕ್ಕುದು,

(4) (2)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಡದಿರುವಲ್ಲಿ, ಆ ಮಾರಾಟದ ಬಗ್ಗೆ ತನಗೆ ತಿಳಿದುಬಂದ ಒಂದು ತಿಂಗಳೊಳಗೆ ಮಂಡಲಿಯು, ಯಾರ ಆದೇಶದ ಮೇರೆಗೆ ಮಾರಾಟವನ್ನು ನಡೆಸಲಾಯಿತೋ ಆ ನ್ಯಾಯಾಲಯಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದರೆ, ಆ ಮಾರಾಟವು ಶೂನ್ಯವಾಗಿದೆಯೆಂದು ಘೋಷಿಸತಕ್ಕುದು,

58. ಭೂ ಅರ್ಜನಾ ಅಧಿನಿಯಮ, 1894ರ ಮೇರೆಗಿನ ವ್ಯವಹರಣೆಗಳು.—(1) ಭೂ ಅರ್ಜನಾ ಅಧಿನಿಯಮ, 1894 (1894ರ 1)ರ ಮೇರೆಗಿನ ವ್ಯವಹರಣೆಗಳು ನಡೆಯುತ್ತಿರುವಾಗ, ಭೂ ಅರ್ಜನೆಗೆ ಒಳಗಾಗಿರುವ ಯಾವುದೇ ಸ್ವತ್ತು ವಕ್ಫ್ ಸ್ವತ್ತೆಂದು ತೀರ್ಪನ್ನು ಕೊಡುವ ಮುಂಚೆ ಕಲೆಕ್ಟರನಿಗೆ ಕಂಡುಬಂದರೆ, ಅಂಥ ಅರ್ಜನೆಯ ಬಗ್ಗೆ ನೋಟೀಸನ್ನು ಕಲೆಕ್ಟರನು ಮಂಡಲಿಗೆ ಜಾರಿ ಮಾಡತಕ್ಕುದು ಮತ್ತು ಅಂಥ ನೋಟೀಸು ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗೆ ಯಾವುದೇ ಕಾಲದಲ್ಲಿ ಮಂಡಲಿಯು ಪಕ್ಷಕಾರನಾಗಿ ಹಾಜರಾಗುವುದಕ್ಕೆ ಮತ್ತು ವಾದ ಮಾಡುವುದಕ್ಕೆ ಸಾಧ್ಯವಾಗುವಂತೆ ಮುಂದಿನ ವ್ಯವಹರಣೆಗಳನು ತಡೆಹಿಡಿಯತಕ್ಕುದು.

(2) ಅರ್ಜನೆಗೆ ಒಳಗಾಗಿರುವ ಯಾವುದೇ ಸ್ವತ್ತು ವಕ್ಫ್ ಸ್ವತ್ತೆಂದು ನಂಬಲು ಮಂಡಲಿಗೆ ಕಾರಣವಿದ್ದಲ್ಲಿ ಐತೀರ್ಪನ್ನು ಕೊಡುವ ಮುಂಚೆ ಯಾವುದೇ ಕಾಲದಲ್ಲಿ ಅದು ವ್ಯವಹರಣೆಯ ಪಕ್ಷಕಾರನಾಗಿ ಹಾಜರಾಗಬಹುದು ಮತ್ತು ವಾದಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಮಂಡಲಿಯು ಹಾಜರಾದಾಗ, ಅಹವಾಲನ್ನು ಹೇಳಿಕೊಳ್ಳಲು ಮಂಡಲಿಗೆ ಅವಕಾಶವನ್ನು ಕೊಡದೆ, ಭೂ ಅರ್ಜನಾ ಅಧಿನಿಯಮ, 1894 (1894ರ 1)ರ 31ನೇ ಪ್ರಕರಣದ ಮೇರೆಗೆ ಅಥವಾ 32ನೇ ಪ್ರಕರಣದ ಮೇರೆಗೆ ಯಾವ ಆದೇಶವನ್ನೂ ಮಾಡತಕ್ಕುದಲ್ಲ.

(4) ಅಹವಾಲನ್ನು ಹೇಳಿಕೊಳ್ಳಲು ಮಂಡಲಿಗೆ ಅವಕಾಶವನ್ನು ಕೊಡದೆ ಭೂ ಅರ್ಜನಾ ಅಧಿನಿಯಮ, 1894 (1894ರ 1)ರ 31ನೇ ಪ್ರಕರಣದ ಅಥವಾ 32ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವು, ಆ ಆದೇಶದ ಬಗ್ಗೆ ತನಗೆ ತಿಳಿದು ಬಂದ ಒಂದು ತಿಂಗಳೊಳಗೆ ಆ ಆದೇಶವನ್ನು ಮಾಡಿದ ಪ್ರಾಧಿಕಾರಕ್ಕೆ ಈ ಬಗ್ಗೆ ಮಂಡಲಿಯು ಅರ್ಜಿಯನ್ನು ಸಲ್ಲಿಸಿದರೆ, ಶೂನ್ಯವಾಗಿದೆಯೆಂದು ಘೋಷಿಸಲ್ಪಡತಕ್ಕುದು.

59. ವಕ್ಫ್‌ಗೆ ಸಂಬಂಧಿಸಿದ ದಾವೆಯ ಅಥವಾ ವ್ಯವಹರಣೆಯ ಬಗ್ಗೆ ಮಂಡಲಿಯು ಅರ್ಜಿ ಸಲ್ಲಿಸಿದರೆ ಅದನ್ನು ಪಕ್ಷಕಾರನನ್ನಾಗಿ ಮಾಡತಕ್ಕುದು.—ವಕ್ಫ್‌ನ ಅಥವಾ ಯಾವುದೇ ವಕ್ಫ್ ಸ್ವತ್ತಿನ ಸಂಬಂಧದಲ್ಲಿ, ವಕ್ಫ್‌ಗೆ ಪರಕೀಯನಾದ ವ್ಯಕ್ತಿಯು ಅಥವಾ ಅವನ ವಿರುದ್ಧ ಅಥವಾ ಇತರ ಯಾವನೇ ವ್ಯಕ್ತಿಯು ಅಥವಾ ಅವನ ವಿರುದ್ಧ ಹೂಡಿದ ಅಥವಾ ಹೂಡಲಾದ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ, ಆ ದಾವೆಯ ಅಥವಾ ವ್ಯವಹರಣೆಯ ಪಕ್ಷಕಾರನಾಗಿ ಮಂಡಲಿಯು ಹಾಜರಾಗಬಹುದು ಮತ್ತು ವಾದಿಸಬಹುದು.

60. ಮುತವಲ್ಲಿಗಳು ಹೂಡಿದ ಅಥವಾ ಅವರ ವಿರುದ್ಧವಾಗಿ ಹೂಡಲಾದ ದಾವೆಗಳಲ್ಲಿ ರಾಜಿ ಮಾಡಿಕೊಳ್ಳಲು ಪ್ರತಿಷೇಧ.—ವಕ್ಫ್ ಸ್ವತ್ತಿನ ಸ್ವಾಮ್ಯಕ್ಕೆ ಅಥವಾ ಮುತವಲ್ಲಿಯ ಹಕ್ಕುಗಳಿಗೆ ಸಂಬಂಧಿಸಿ ಯಾವುದೇ ನ್ಯಾಯಾಲಯದಲ್ಲಿ ವಕ್ಫ್‌ನ ಮುತವಲ್ಲಿಯು ಹೂಡಿದ ಅಥವಾ ಅವನ ವಿರುದ್ಧವಾಗಿ ಹೂಡಲಾದ ಯಾವ ದಾವೆಯನ್ನೂ ಅಥವಾ ವ್ಯವಹರಣೆಯನ್ನೂ ಮಂಡಲಿಯ ಮಂಜೂರಾತಿ ಇಲ್ಲದೆ ರಾಜಿ ಮಾಡಿಕೊಳ್ಳತಕ್ಕುದಲ್ಲ.

61. ಮುತವಲ್ಲಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ವಿಫಲನಾದ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವ ಅಧಿಕಾರ.—(1) ಮುಸ್ಲಿಂ ಕಾನೂನಿನಪ್ರಕಾರ ಧರ್ಮಶ್ರದ್ಧೆಯದೆಂದು, ಧಾರ್ಮಿಕವಾದುದೆಂದು ಅಥವಾ ಧರ್ಮಾರ್ಥವಾದುದೆಂದು ಮಾನ್ಯತೆ ಪಡೆದ ಯಾವುದೇ ಕಾರ್ಯವನ್ನು ನೆರವೇರಿಸಲು ಮುತವಲ್ಲಿಯು ಬಾಧ್ಯನಾಗಿರುವಲ್ಲಿ ಮತ್ತು ಮುತವಲ್ಲಿಯು ಅಂಥ ಕಾರ್ಯವನ್ನು ಮಾಡಲು ವಿಫಲನಾದಲ್ಲಿ ಆ ಕಾರ್ಯವನ್ನು ನೆರವೇರಿಸಲು ಅವಶ್ಯವಾದ ಮೊಬಲಗನ್ನು ಮಂಡಲಿಗೆ ಅಥವಾ ಮಂಡಲಿಯಿಂದ ಈ ಬಗ್ಗೆ ಅಧಿಕೃತನಾದ ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕೆಂದು ನಿರ್ದೇಶಿಸಿ ಮುತವಲ್ಲಿಗೆ ಆದೇಶವನ್ನು ಮಾಡಬೇಕೆಂದು ಮಂಡಲಿಯು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ವಕ್ಫ್ ಮೇರೆಗೆ ತನ ಮೇಲೆ ವಿಧಿಸಲಾದ ಇತರ ಯಾವುವೇ ಕರ್ತವ್ಯಗಳನ್ನು ನಿರ್ವಹಿಸಲು ಮುತವಲ್ಲಿಯು ಬಾಧ್ಯನಾಗಿರುವಲ್ಲಿ ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸಲು ಮುತವಲ್ಲಿಯು ಬುದ್ಧಿಪೂರ್ವಕವಾಗಿ ವಿಫಲನಾದಲ್ಲಿ, ಮಂಡಲಿಯು ಅಥವಾ ವಕ್ಫ್‌ನಲ್ಲಿ ಹಿತಾಸಕ್ತಿಯುಳ್ಳ ಯಾವನೇ ವ್ಯಕ್ತಿಯು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ನ್ಯಾಯಾಲಯವು ಅದರ ಮೇಲೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಮಾಡಬಹುದು.

## ಅಧ್ಯಾಯ—VIII

### ಸಂಕೀರ್ಣ

62. ಕೇಂದ್ರ ಸರ್ಕಾರದ ನಿರ್ದೇಶಗಳು.—(1) ಮಂಡಲಿಯು ಅನುಸರಿಸಬೇಕಾದ ಕಾರ್ಯನೀತಿಯ ಪ್ರಶ್ನೆಗಳ ಮೇಲೆ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ನಿರ್ದೇಶಗಳನ್ನು ಕೇಂದ್ರ ಸರ್ಕಾರವು ಕೊಡಬಹುದು ಮತ್ತು ಅಂಥ ನಿರ್ದೇಶಗಳನು ಕೊಡುವುದಕ್ಕಾಗಿ ಅದು ಸಂಬಂಧಪಟ್ಟ ರಾಜ್ಯ ಸರ್ಕಾರದ ಮೂಲಕ ಯಾವುದೇ ಮಂಡಲಿಯಿಂದ ಯಾವುದೇ ನಿಯತಕಾಲಿಕವಾದ ಅಥವಾ ಇತರ ವರದಿಯನ್ನು ಅಥವಾ ಮಾಹಿತಿಯನ್ನು ತರಿಸಿಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, (1)ನೇ ಉಪಪ್ರಕರಣದ ಮೇರೆಗೆ ಕೊಡಲಾದ ನಿರ್ದೇಶಗಳಿಂದ ಮಂಡಲಿಯು ಮಾರ್ಗದರ್ಶನ ಪಡೆಯತಕ್ಕದು.

63. ರಾಜ್ಯ ಸರ್ಕಾರದ ನಿರ್ದೇಶಗಳು.—62ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಕಾರ್ಯನೀತಿಯ ಪ್ರಶ್ನೆಗಳ ಮೇಲಿನ ಯಾವುವೇ ನಿರ್ದೇಶಗಳಿಗೆ ಒಳಪಟ್ಟು, ಕಾಲಕಾಲಕ್ಕೆ ತಾನು ಸೂಕ್ತವೆಂದು ಆಲೋಚಿಸುವಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶಗಳನ್ನು ರಾಜ್ಯ ಸರ್ಕಾರವು ಮಂಡಲಿಗೆ ಕೊಡಬಹುದು ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಮಂಡಲಿಯು ಅಂಥ ಯಾವುವೇ ನಿರ್ದೇಶಗಳನ್ನು ಪಾಲಿಸತಕ್ಕದು.

64. ಮಂಡಲಿಯನ್ನು ರದ್ದುಗೊಳಿಸುವ ಅಧಿಕಾರ.—(1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಲಾದ ಕರ್ತವ್ಯವನ್ನು ನೆರವೇರಿಸಲು ಮಂಡಲಿಯು ಅಸಮರ್ಥವಾಗಿದೆಯೆಂದು, ಅಥವಾ ಅದನ್ನು ನೆರವೇರಿಸುವಲ್ಲಿ ಪುನಃ ಪುನಃ ತಪ್ಪಿದೆ ಎಂದು ಅಥವಾ ತನ್ನ ಅಧಿಕಾರಗಳನ್ನು ಮೀರಿದೆಯೆಂದು ಅಥವಾ ದುರುಪಯೋಗಪಡಿಸಿಕೊಂಡಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮಂಡಲಿಯನ್ನು ರದ್ದುಗೊಳಿಸಬಹುದು :

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಮಂಡಲಿಯನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ಮಂಡಲಿಗೆ ಸೂಕ್ತ ಕಾಲವನ್ನು ರಾಜ್ಯ ಸರ್ಕಾರವು ಕೊಡತಕ್ಕದು ಮತ್ತು ಮಂಡಲಿಯ ವಿವರಣೆಗಳು ಮತ್ತು ಆಕ್ಷೇಪಣೆಗಳು, ಯಾವುವಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದು.

(2) ಮಂಡಲಿಯನ್ನು ರದ್ದುಗೊಳಿಸಿದ ಬಗ್ಗೆ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,—

(ಕ) ರದ್ದುಗೊಳಿಸಿದ ದಿನಾಂಕದಿಂದ ಮಂಡಲಿಯ ಎಲ್ಲ ಸದಸ್ಯರು ಅಂಥ ಸದಸ್ಯರಾಗಿರುವ ತಮ್ಮ ಪದಗಳನ್ನು ಖಾಲಿ ಮಾಡತಕ್ಕದು ;

(ಖ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಮಂಡಲಿಯಿಂದ ಅಥವಾ ಅದರ ಪರವಾಗಿ ಚಲಾಯಿಸಲ್ಪಡಬಹುದಾದ ಅಥವಾ ನೆರವೇರಿಸಲ್ಪಡಬಹುದಾದ ಎಲ್ಲ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು, ರದ್ದಿಯಾತಿಯ ಅವಧಿಯಲ್ಲಿ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದು ಮತ್ತು ನೆರವೇರಿಸತಕ್ಕದು ;

(ಗ) ಮಂಡಲಿಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತು ರದ್ದಿಯಾತಿಯ ಅವಧಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರದ್ದಿಯಾತಿಯ ಅವಧಿಯು ಮುಗಿದ ಮೇಲೆ, ರಾಜ್ಯಸರ್ಕಾರವು—

(ಕ) ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ಅವಧಿಯವರೆಗೆ ರದ್ದಿಯಾತಿಯ ಅವಧಿಯನ್ನು ವಿಸ್ತರಿಸಬಹುದು ; ಅಥವಾ

(ಖ) 10ನೇ ಪ್ರಕರಣದಲ್ಲಿ ಮತ್ತು 11ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಂಡಲಿಯನ್ನು ಪುನರ್ರಚಿಸಬಹುದು,

65. ಸದ್ಭಾವನೆಯಿಂದ ಮಾಡಿದ ಕಾರ್ಯದ ರಕ್ಷಣೆ.—ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಬೇಕೆಂದು ಉದ್ದೇಶಿಸಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ, ಮಂಡಲಿಯ ಅಥವಾ ಕಮೀಷನರ್‌ನ ಅಥವಾ ಈ ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ನೇಮಿತನಾದ ಇತರ ಯಾವನೇ ವ್ಯಕ್ತಿಯ ವಿರುದ್ಧವಾಗಿ ಯಾವ ದಾವೆಯನ್ನಾಗಲಿ ಅಥವಾ ಇತರ ನ್ಯಾಯಿಕ ವ್ಯವಹರಣೆಯನ್ನಾಗಲಿ ಹೂಡಲು ಅವಕಾಶವಿರತಕ್ಕದಲ್ಲ.

66. ಕಮಿಷನರನು, ಲೆಕ್ಕಪರಿಶೋಧಕನು, ಮೊದಲಾದವರನ್ನು ಲೋಕ ನೌಕರರೆಂದು ಭಾವಿಸತಕ್ಕದು.—ಕಮಿಷನರನನ್ನು, ಮಂಡಲಿಯ ಪ್ರತಿಯೊಬ್ಬ ಲೆಕ್ಕಪರಿಶೋಧಕನನ್ನು, ಪ್ರತಿಯೊಬ್ಬ ಅಧಿಕಾರಿಯನ್ನು ಮತ್ತು ನೌಕರನನ್ನು ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳಿಂದ ಅಥವಾ ಆದೇಶಗಳಿಂದ ತನಗೆ ವಿಧಿಸಲಾದ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ಕ್ರಮಬದ್ಧವಾಗಿ ನೇಮಿತನಾದ ಇತರ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ (1860ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದು.

66ಕ. ಕೆಲವು ಮಂಡಲಿಗಳ ಪುನಾರಚನೆಗಾಗಿ ವಿಶೇಷ ಉಪಬಂಧ.—(1) ರಾಜ್ಯಗಳ ಪುನರ್ ರಚನೆಯ ಅಧಿನಿಯಮ, 1956 (1956ರ 37)ರ ಮೇರೆಗೆ ರಾಜ್ಯಗಳ ಪುನರ್ ರಚನೆಯ ಕಾರಣದಿಂದಾಗಿ, 1956ನೇ ನವೆಂಬರ್ 1ನೇ ದಿನಾಂಕದ ನಿಕಟ ಪೂರ್ವದಲ್ಲಿ ಯಾವ ರಾಜ್ಯದ ಸಂಬಂಧದಲ್ಲಿ ಒಂದು ಮಂಡಲಿಯು ಕೆಲಸ ಮಾಡುತ್ತಿತ್ತೋ ಆ ರಾಜ್ಯವನ್ನು ಪೂರ್ತಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಆ ದಿನಾಂಕದಂದು ಇನ್ನೊಂದು ರಾಜ್ಯಕ್ಕೆ ವರ್ಗಾಯಿಸಿದ್ದರೆ ಮತ್ತು ಅಂಥ ವರ್ಗಾವಣೆಯ ಕಾರಣದಿಂದಾಗಿ, ಯಾವ ರಾಜ್ಯದ ಯಾವುದೇ ಭಾಗದಲ್ಲಿ ಆ ಮಂಡಲಿಯು ಕೆಲಸ ಮಾಡುತ್ತಿದೆಯೋ ಆ ಮಂಡಲಿಯನ್ನು ವಿಸರ್ಜಿಸಬೇಕೆಂದು ಅಥವಾ ಅದನ್ನು ಆ ರಾಜ್ಯಕ್ಕೆ ಇಡಿಯಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಅಂತರ ರಾಜ್ಯ ಮಂಡಲಿಯನ್ನಾಗಿ ಪುನರ್ಘಟಿಸಬೇಕೆಂದು ಮತ್ತು ಪುನರ್ ರಚಿಸಬೇಕೆಂದು ಆ ರಾಜ್ಯ ಸರ್ಕಾರಕ್ಕೆ ಕಂಡು ಬಂದರೆ, ಮಂಡಲಿಯ ಆಸ್ತಿಗಳನ್ನು ಹಕ್ಕುಗಳನ್ನು, ಮತ್ತು ಹೊಣೆಗಾರಿಕೆಗಳನ್ನು ಇತರ ಯಾವುದೇ ಮಂಡಲಿಗೆ ಅಥವಾ ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವುದರ ಬಗೆಗಿನ ಮತ್ತು ಮಂಡಲಿಯ ನೌಕರರನ್ನು ವರ್ಗಾಯಿಸುವುದರ ಅಥವಾ ಪುನರ್ನೇಮಕ ಮಾಡುವುದರ ಬಗೆಗಿನ ಪ್ರಸ್ತಾವಗಳನ್ನೊಳಗೊಂಡು, ಅಂಥ ವಿಸರ್ಜನೆಗಾಗಿ ಅಥವಾ ಸಂದರ್ಭಾನುಸಾರ ಅಂಥ ಪುನರ್ಘಟನೆಗಾಗಿ ಮತ್ತು ಪುನರ್ ಸಂಘಟನೆಗಾಗಿ ರಾಜ್ಯ ಸರ್ಕಾರವು ಒಂದು ಯೋಜನೆಯನ್ನು ಸಿದ್ಧಗೊಳಿಸಬಹುದು ಮತ್ತು ಆ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಲಾದ ಯೋಜನೆಯನ್ನು ಸ್ವೀಕರಿಸಿದ ಮೇಲೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳೊಡನೆ ಸಮಾಲೋಚನೆಯನ್ನು ನಡೆಸಿದ ಅನಂತರ, ಕೇಂದ್ರ ಸರ್ಕಾರವು ಮಾರ್ಪಾಟುಗಳೊಡನೆ ಅಥವಾ ಮಾರ್ಪಾಟು ಗಳಿಲ್ಲದೆ ಆ ಯೋಜನೆಯನ್ನು ಅನುಮೋದಿಸಬಹುದು ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಮಾಡುವುದರ ಮೂಲಕ ಹಾಗೆ ಅನುಮೋದಿಸಲಾದ ಯೋಜನೆಯನ್ನು ಕಾರ್ಯಗತಗೊಳಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗಿನ ಆದೇಶವು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ—

(ಕ) ಮಂಡಲಿಯ ವಿಸರ್ಜನೆ ;

(ಖ) ಅವಶ್ಯವಿದ್ದಲ್ಲಿ ಹೊಸ ಮಂಡಲಿಯ ಸ್ಥಾಪನೆಯನ್ನೊಳಗೊಂಡು ಯಾವುದೇ ರೀತಿಯಲ್ಲಿ ಮಂಡಲಿಯ ಪುನರ್ ರಚನೆ ಮತ್ತು ಪುನರ್ ಸಂಘಟನೆ ;

(ಗ) ಪುನರ್ಘಟಿತವಾದ ಮಂಡಲಿಯು ಅಥವಾ ಹೊಸ ಮಂಡಲಿಯು ಯಾವ ಪ್ರದೇಶದ ಬಗೆಗೆ ಕೆಲಸ ಮಾಡತಕ್ಕದು ಮತ್ತು ಕಾರ್ಯಾಚರಣೆ ನಡೆಸತಕ್ಕದು ಎಂಬುದು ;

(ಘ) (ಮಂಡಲಿಯು ಮಾಡಿಕೊಂಡಿರುವ ಯಾವುದೇ ಕರಾರಿನ ಮೇರೆಗಿನ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಒಳಗೊಂಡು ಮಂಡಲಿಯ) ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಇಡಿಯಾಗಿ ಅಥವಾ ಭಾಗಶಃ ಇತರ ಯಾವುದೇ ಮಂಡಲಿಗೆ ಅಥವಾ ರಾಜ್ಯ ಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅಂಥ ವರ್ಗಾವಣೆಯ ನಿಬಂಧನೆಗಳು ಹಾಗು ಷರತ್ತುಗಳು;

(ಙ) ಮಂಡಲಿಯು ಪಕ್ಷಕಾರವಾಗಿರುವ ಯಾವುದೇ ನ್ಯಾಯಿಕ ವ್ಯವಹರಣೆಯ ಪಕ್ಷಕಾರನನ್ನಾಗಿ ಅಂಥ ಯಾವನೇ ವರ್ಗಾಂತರಿತನನ್ನು ಮಂಡಲಿಯ ಬದಲಾಗಿ ಸೇರಿಸುವುದು ಅಥವಾ ಅಂಥ ಯಾವನೇ ವರ್ಗಾಂತರಿತನನ್ನು ಹೆಚ್ಚಾಗಿ ಸೇರಿಸುವುದು, ಮತ್ತು ಮಂಡಲಿಯ ಎದುರಿನಲ್ಲಿ ಇತ್ಯರ್ಥದಲ್ಲಿರುವ ಯಾವುದೇ ವ್ಯವಹರಣೆಯನ್ನು ಅಂಥ ಯಾವನೇ ವರ್ಗಾಂತರಿತನಿಗೆ ವರ್ಗಾಯಿಸುವುದು;

(ಚ) ಮಂಡಲಿಯ ಯಾರಾದರೂ ನೌಕರರನ್ನು ಅಂಥ ಯಾವನೇ ವರ್ಗಾಂತರಿತನಿಗೆ ವರ್ಗಾಯಿಸುವುದು ಅಥವಾ ಅಂಥ ಯಾವನೇ ವರ್ಗಾಂತರಿತನು ಅವರನ್ನು ಪುನರ್ನೇಮಿಸುವುದು ಮತ್ತು ರಾಜ್ಯಗಳ ಪುನರ್ ರಚನೆ ಅಧಿನಿಯಮ, 1956 (1956ರ 37)ರ 111ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಂಥ ವರ್ಗಾವಣೆಯ ಅಥವಾ ಪುನರ್ನೇಮಕದ ಅನಂತರ ಅಂಥ ನೌಕರರಿಗೆ ಅನ್ವಯಿಸಬಹುದಾದ ಸೇವಾ ನಿಬಂಧಗಳು ಮತ್ತು ಷರತ್ತುಗಳು ;

(ಛ) ಅನುಮೋದಿತವಾದ ಯೋಜನೆಯನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಪ್ರಾಸಂಗಿಕ, ಅನುಷಂಗಿಕ ಮತ್ತು ಪೂರಕ ವಿಷಯಗಳು.

(4) ಯಾವುದೇ ಮಂಡಲಿಯ ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ವರ್ಗಾಯಿಸುವ ಆದೇಶವನ್ನು ಈ ಪ್ರಕರಣದ ಮೇರೆಗೆ ಮಾಡಿರುವಲ್ಲಿ, ಆಗ, ಆ ಆದೇಶದ ಬಲದಿಂದಾಗಿ ಮಂಡಲಿಯ ಅಂಥ ಆಸ್ತಿಗಳು, ಹಕ್ಕುಗಳು ಮತ್ತು ಹೊಣೆ ಗಾರಿಕೆಗಳು ಆ ವರ್ಗಾಂತರಿತನಲ್ಲಿ ನಿಹಿತವಾಗತಕ್ಕದು ಮತ್ತು ಅವು ವರ್ಗಾಂತರಿತನ ಆಸ್ತಿಗಳು, ಹಕ್ಕುಗಳು ಹಾಗೂ ಹೊಣೆಗಾರಿಕೆಗಳು ಆಗತಕ್ಕದು.

(5) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದು ಮತ್ತು ಈ ಅಧಿನಿಯಮವು ಹಾಗು ಅದರ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳು, ಆ ಆದೇಶದ ಉಪಬಂಧಗಳಿಗೆ ಒಳಪಟ್ಟು, ಪರಿಣಾಮಕಾರಿಯಾಗತಕ್ಕದು :

(6) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ಅನಂತರ, ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದು.

66ಖ. ರಾಜ್ಯದ ಒಂದು ಭಾಗಕ್ಕೆ ಮಂಡಲಿಯನ್ನು ಸ್ಥಾಪಿಸುವುದಕ್ಕಾಗಿ ವಿಶೇಷ ಉಪಬಂಧ.—(1) ರಾಜ್ಯಗಳ ಪುನರ್ ರಚನಾ ಅಧಿನಿಯಮ, 1956 (1956ರ 37)ರ ಮೂಲಕ ಮಾಡಲಾದ ಪ್ರಾದೇಶಿಕ ಬದಲಾವಣೆಗಳ ಕಾರಣದಿಂದಾಗಿ, ಈ ಅಧಿನಿಯಮವು 1956ರ ನವೆಂಬರ್ 1ನೇ ದಿನಾಂಕದಿಂದ ರಾಜ್ಯದ ಯಾವುದೇ ಭಾಗಕ್ಕೆ ಅಥವಾ ಭಾಗಗಳಿಗೆ ಮಾತ್ರ ಅನ್ವಯಿಸುತ್ತಿದ್ದು, ಅದರ ಉಳಿದ ಭಾಗದಲ್ಲಿ ಜಾರಿಯಲ್ಲಿ ತರಲ್ಪಡದಿದ್ದರೆ, ಆಗ ಈ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಅಧಿನಿಯಮವು ಜಾರಿಯಲ್ಲಿರುವ ಭಾಗಕ್ಕಾಗಿ ಅಥವಾ ಭಾಗಗಳಿಗಾಗಿ ಒಂದು ಅಥವಾ ಹೆಚ್ಚಿನ ಮಂಡಲಿಗಳನ್ನು ಸ್ಥಾಪಿಸುವುದು ಆ ರಾಜ್ಯ ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದು ಮತ್ತು ಅಂಥ ಸಂದರ್ಭದಲ್ಲಿ, ಒಂದು ಮಂಡಲಿಗೆ ಸಂಬಂಧಿಸಿ ಈ ಅಧಿನಿಯಮದಲ್ಲಿ "ರಾಜ್ಯ" ಎಂಬ ಪದದ ಬಗ್ಗೆ ಇರುವ ಯಾವುದೇ ಉಲ್ಲೇಖವನ್ನು ರಾಜ್ಯದ ಯಾವ ಭಾಗದ ಸಂಬಂಧದಲ್ಲಿ ಮಂಡಲಿಯು ಸ್ಥಾಪಿತವಾಗಿದೆಯೋ ಆ ಭಾಗಕ್ಕೆ ಸಂಬಂಧಿಸಿದ ಉಲ್ಲೇಖವೆಂದು ಅರ್ಥೈಸತಕ್ಕದು.

(2) ಅಂಥ ಯಾವುದೇ ಮಂಡಲಿಯನ್ನು ಸ್ಥಾಪಿಸಿರುವಲ್ಲಿ ಮತ್ತು ಇಡೀ ರಾಜ್ಯಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸಬೇಕೆಂದು ಆ ರಾಜ್ಯ ಸರ್ಕಾರಕ್ಕೆ ಕಂಡುಬಂದಲ್ಲಿ ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಆದೇಶದ ಮೂಲಕ ರಾಜ್ಯದ ಭಾಗಕ್ಕಾಗಿ ಸ್ಥಾಪಿಸಲಾದ ಆ ಮಂಡಲಿಯನ್ನು ವಿಸರ್ಜಿಸಬಹುದು ಅಥವಾ ಅಂಥ ಮಂಡಲಿಯನು ಪುನರ್‌ಘಟಿಸಬಹುದು ಮತ್ತು ಪುನರ್‌ರಚಿಸಬಹುದು ಅಥವಾ ಇಡೀ ರಾಜ್ಯಕ್ಕಾಗಿ ಒಂದು ಹೊಸ ಮಂಡಲಿಯನ್ನು ಸ್ಥಾಪಿಸಬಹುದು, ಮತ್ತು ತದನಂತರ ರಾಜ್ಯದ ಆ ಭಾಗದ ಮಂಡಲಿಯ ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸಂದರ್ಭಾನುಸಾರ ಹಾಗೆ ಪುನರ್ಘಟಿಸಲಾದ ಮಂಡಲಿಯಲ್ಲಿ ಅಥವಾ ಹೊಸ ಮಂಡಲಿಯಲ್ಲಿ ನಿಹಿತವಾಗಿರತಕ್ಕದು ಮತ್ತು ಅವು ಅದರ ಆಸ್ತಿಗಳು, ಹಕ್ಕುಗಳು ಹಾಗು ಹೊಣೆಗಾರಿಕೆಗಳು ಆಗಿರತಕ್ಕದು.

66ಗ. ಇಸ್ಲಾಂ ಧರ್ಮವನ್ನು ಅನುಸರಿಸದಿರದ ವ್ಯಕ್ತಿಗಳು ಕೆಲವು ವಕ್ಫ್‌ಗಳನ್ನು ಪೋಷಿಸುವುದಕ್ಕಾಗಿ ಕೊಟ್ಟ ಅಥವಾ ದೇಣಿಗೆಯಾಗಿ ಕೊಟ್ಟ ಸ್ವತ್ತುಗಳಿಗೆ ಈ ಅಧಿನಿಯಮದ ಅನ್ವಯ.—ಈ ಅಧಿನಿಯಮದಲ್ಲಿ ಏನೇ ಇದ್ದರೂ, ಇಸ್ಲಾಂ ಧರ್ಮವನ್ನು ಅನುಸರಿಸದಿರದ ಯಾವನೇ ವ್ಯಕ್ತಿಯು.—

(ಕ) ಮಸೀದಿ, ಈದ್ಗಾ, ಇಮಾಂಬಾಡಾ, ದರ್ಗಾ, ಖಾನಗಾಹ್ ಅಥವಾ ಮುಖ್‌ಬಾರಾ ;

(ಖ) ಮುಸ್ಲಿಂರ ಕಬರಸ್ಥಾನ ;

(ಗ) ಛತ್ರ ಅಥವಾ ಮುಸಾಫಿರ್ ಖಾನಾ,

ಆಗಿರುವ ವಕ್ಫ್‌ನ ಪೋಷಣೆಗಾಗಿ ಯಾವುದೇ ಚಿರಸ್ವತ್ತನ್ನು ಅಥವಾ ಸ್ಥಿರಸ್ವತ್ತನ್ನು ಕೊಟ್ಟಿರುವಲ್ಲಿ ಅಥವಾ ದೇಣಿಗೆಯಾಗಿ ಕೊಟ್ಟಿರುವಲ್ಲಿ ಅಂಥ ಸ್ವತ್ತು ಆ ವಕ್ಫ್‌ನಲ್ಲಿ ಸೇರಿದೆಯೆಂದು ಭಾವಿಸತಕ್ಕದು ಮತ್ತು ಅದು ಯಾವ ವಕ್ಫ್‌ನಲ್ಲಿ ಸೇರಿದೆಯೋ ಆ ವಕ್ಫ್‌ನ ರೀತಿಯಲ್ಲಿಯೇ ಅದರ ಬಗ್ಗೆ ವ್ಯವಹರಿಸತಕ್ಕದು.

67. ನಿಯಮ ರಚನಾಧಿಕಾರ.—(1) ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, IIಕ ಅಧ್ಯಾಯದಲ್ಲಿರುವ ಉದ್ದೇಶಗಳನ್ನು ಹೊರತುಪಡಿಸಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಮಾಡುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಮುಂದೆ ಹೇಳಲಾದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧೆಬಾರದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:—

(ಕ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ವಕ್ಫ್‌ಗಳ ಪಟ್ಟಿಯು ಒಳಗೊಳ್ಳಬಹುದಾದ ವಿವರಗಳು ;

(ಖ) ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೊಳಪಟ್ಟು ಮಂಡಲಿಯು ಯಾವುದೇ ಸ್ವತ್ತನ್ನು ವರ್ಗಾಯಿಸಬಹುದು ಎಂಬುದು ;

(ಗ) ಮಂಡಲಿಯ ಪ್ರಕಾರ್ಯಗಳ ವಿನಿಯಮನ ;

(ಘ) ಮಂಡಲಿಯ ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಙ) ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸಬಹುದಾದ ರೀತಿ;

(ಚ) ಈ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ನಡೆಸುವಾಗ, ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವ ಯಾವ ಅಧಿಕಾರಗಳನ್ನು ಮಂಡಲಿಯು ಅಥವಾ ಕಮಿಷನರನು ಅಥವಾ ಇತರ ಯಾವನೇ ವ್ಯಕ್ತಿಯು ಚಲಾಯಿಸಬಹುದು ಎಂಬುದು ;

(ಛ) ವಕ್ಫ್‌ಗಳ ರಿಜಿಸ್ಟರನ್ನು ಇಟ್ಟುಕೊಂಡು ಬರಬಹುದಾದ ನಮೂನೆ ಮತ್ತು ಅದು ಒಳಗೊಳ್ಳಬಹುದಾದ ಹೆಚ್ಚಿನ ವಿವರಗಳು ;

(ಜ) ಮಂಡಲಿಯ ಆಯವ್ಯಯಪತ್ರವನ್ನು ತಯಾರಿಸಬಹುದಾದ ನಮೂನೆ ಮತ್ತು ಒಪ್ಪಿಸಬಹುದಾದ ಕಾಲ ;

(ಝ) ವಕ್ಫ್ ನಿಧಿಯ ಲೆಕ್ಕಪತ್ರಗಳನ್ನು ಇಡಬಹುದಾದ ಮತ್ತು ಪರಿಶೋಧಿಸಿಕೊಳ್ಳಬಹುದಾದ ರೀತಿ ಹಾಗು ಲೆಕ್ಕ ಪರಿಶೋಧಕನ ವರದಿಯ ಒಳಾಂಶಗಳು ;

(ಞ) ವಕ್ಫ್ ನಿಧಿಗೆ ಹಣ ಸಂದಾಯ ಮಾಡುವುದು, ಅಂಥ ಹಣವನ್ನು ತೊಡಗಿಸುವುದು, ಅದರ ಅಭಿರಕ್ಷೆ ಮತ್ತು ಬಟವಾಡೆ ;

(ಟ) ಯಾವ ಸಂದರ್ಭಗಳಲ್ಲಿ ಮತ್ತು ಯಾವ ನಿಬಂಧನೆಗಳಿಗೆ ಹಾಗು ಷರತ್ತುಗಳಿಗೆ ಒಳಪಟ್ಟು ಮಂಡಲಿಯು ಸಾಲವನ್ನು ಪಡೆಯಲು ಅವಕಾಶವನು ಕೊಡಬಹುದು ;

(ಠ) ಯಾವುದೇ ವಕ್ಫ್‌ನ ಸಂಬಂಧದಲ್ಲಿ ಸಂದಾಯ ಮಾಡಬಹುದಾದ ವಂತಿಗೆಯನ್ನು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಮಂಡಲಿಯು ಕಡಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು ;

(ಡ) ಈ ಅಧಿನಿಯಮದ ಮೇರೆಗೆ ಬರಬೇಕಾಗಿರುವ ಯಾವುದೇ ಮೊಬಲಗನ್ನು ಭೂ ಕಂದಾಯದ ಬಾಕಿಯಂತೆ ವಸೂಲ್ಮಾಡಲು ಅನುಸರಿಸಬೇಕಾದ ಪ್ರಕ್ರಿಯೆ ;

(ಢ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

68. ವಿನಿಯಮಗಳನ್ನು ರಚಿಸುವ ಅಧಿಕಾರ.—(1) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ, ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಅಸಂಗತವಾಗಿರದ ವಿನಿಯಮಗಳನ್ನು ಮಂಡಲಿಯು ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯೊಡನೆ ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಮುಂಚೆ ಹೇಳಲಾದ ಅಧಿಕಾರಿಗಳ ಸಾಮಾನ್ಯಾನ್ವಯಕ್ಕೆ ಬಾಧೆಬಾರದಂತೆ, ಅಂಥ ವಿನಿಯಮಗಳು, ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:—

(ಕ) ಮಂಡಲಿಯ ಸಭೆಗಳ ಕಾಲ ಮತ್ತು ಸ್ಥಳ ಮತ್ತು ಅದರ ಸಭೆಗಳಲ್ಲಿ ಕೋರಂ ಮಾಡುವುದಕ್ಕಾಗಿ ಅವಶ್ಯವಾದ ಸದಸ್ಯರ ಸಂಖ್ಯೆ ;

(ಖ) ಮಂಡಲಿಯ ಸಭೆಗಳಲ್ಲಿನ ಪ್ರಕ್ರಿಯೆ ಮತ್ತು ಕಾರ್ಯ ನಿರ್ವಹಣೆ ;

(ಗ) ಮಂಡಲಿಯ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳು, ಮತ್ತು ಅಂಥ ಸಮಿತಿಗಳ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯ ನಿರ್ವಹಣೆಯ ಪ್ರಕ್ರಿಯೆ ;

(ಘ) ಮಂಡಲಿಯ ಅಧ್ಯಕ್ಷನಿಗೆ ಅಥವಾ ಸದಸ್ಯರಿಗೆ ಅಥವಾ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯಗಳು ಅಥವಾ ಫೀಜು;

(ಙ) ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಚ) ವಕ್ಫ್‌ಗಳ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ, ಅದರಲ್ಲಿ ಅಡಕವಾಗಿರಬೇಕಾದ ಹೆಚ್ಚಿನ ವಿವರಗಳು ಮತ್ತು ವಕ್ಫ್‌ಗಳ ನೋಂದಣಿಯ ರೀತಿ ಮತ್ತು ಸ್ಥಳ ;

(ಛ) ವಕ್ಫ್‌ಗಳ ರಿಜಿಸ್ಟರಿನಲ್ಲಿ ಅಡಕವಾಗಿರಬೇಕಾದ ಹೆಚ್ಚಿನ ವಿವರಗಳು ;

(ಜ) ಮಂಡಲಿಯ ಕಛೇರಿಯಲ್ಲಿ ಇಡಬೇಕಾದ ಪುಸ್ತಕಗಳು ;

(ಝ) ವಕ್ಫ್‌ಗಳ ಆಯವ್ಯಯ ಪತ್ರವನ್ನು ಮುತವಲ್ಲಿಗಳು ಯಾವ ನಮೂನೆಗಳಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬಹುದು ಮತ್ತು ಒಪ್ಪಿಸಬಹುದು ಹಾಗು ಮಂಡಲಿಯು ಅವನ್ನು ಅನುಮೋದಿಸಬಹುದು ಎಂಬುದು ;

(ಞ) ವಕ್ಫ್‌ಗಳ ಲೆಕ್ಕಪತ್ರಗಳನ್ನು ಇಡಬಹುದಾದ ಮತ್ತು ಪರಿಶೋಧಿಸಿಕೊಳ್ಳಬಹುದಾದ ರೀತಿ ಹಾಗು ಲೆಕ್ಕಪರಿಶೋಧಕನ ವರದಿಯ ಒಳಾಂಶಗಳು ;

(ಟ) ಈ ಅಧಿನಿಯಮದ ಮೇರೆಗೆ ವಂತಿಗೆಗಳನ್ನು ವಿಧಿಸುವ ಉದ್ದೇಶಕ್ಕಾಗಿ ವಕ್ಫ್‌ನ ಆದಾಯವನ್ನು ಲೆಕ್ಕಹಾಕುವ ವಿಧಾನ ;

(ಠ) ಮಂಡಳಿಯ ವ್ಯವಹರಣೆಗಳ ಮತ್ತು ದಾಖಲೆಗಳ ಅಥವಾ ಅವುಗಳ ಪ್ರತಿಗಳ ಪರಿಶೀಲನೆಗಾಗಿ ಸಂದಾಯ ಮಾಡಬೇಕಾದ ಫೀಜು ;

(ಡ) ಮಂಡಲಿಯ ಯಾವುದೇ ಆದೇಶವನ್ನು ಅಥವಾ ತೀರ್ಮಾನವನ್ನು ಅಧಿಪ್ರಮಾಣೀಕರಿಸಬೇಕಾದ ವ್ಯಕ್ತಿಗಳು ;

(ಢ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ಮಾಡಲಾದ ಎಲ್ಲ ವಿನಿಯಮಗಳನ್ನು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ವಿನಿಯಮಗಳು ಅಂಥ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು.

69. ನಿರಸನ ಮತ್ತು ಉಳಿಸುವಿಕೆಗಳು.—(1) ಈ ಅಧಿನಿಯಮವು ಅನ್ವಯವಾಗುವ ಯಾವುದೇ ವಕ್ಫ್‌ಗೆ ಈ ಕೆಳಕಂಡ ಅಧಿನಿಯಮಗಳು ಅನ್ವಯಿಸತಕ್ಕದ್ದಲ್ಲ, ಎಂದರೆ:

(2) ಬಂಗಾಳ ಧರ್ಮಾರ್ಥ ದತ್ತಿಗಳು, ಸಾರ್ವಜನಿಕ ಕಟ್ಟಡಗಳು ಮತ್ತು ರಾಜಗಾಮಿ ಸ್ವತ್ತುಗಳ ವಿನಿಯಮ, 1810 (1810ರ ಬಂಗಾಳದ XIXನೇ ವಿನಿಯಮ);

(1) ಧಾರ್ಮಿಕ ದತ್ತಿಗಳ ಅಧಿನಿಯಮ, 1863 (1863ರ 20);

(3) ಧರ್ಮಾರ್ಥ ದತ್ತಿಗಳ ಅಧಿನಿಯಮ, 1890 (1890ರ 6);

(4) ಧರ್ಮಾರ್ಥ ಮತ್ತು ಧಾರ್ಮಿಕ ನ್ಯಾಸಗಳ ಅಧಿನಿಯಮ, 1920 (1920ರ 14);

(5) ಮುಸಲ್ಮಾನ ವಕ್ಫ್ ಅಧಿನಿಯಮ, 1923 (1923ರ 42).

(2) ಯಾವುದೇ ರಾಜ್ಯದಲ್ಲಿ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ [(1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿನಿಯಮಗಳನ್ನುಳಿದು] ಈ ಅಧಿನಿಯಮಕ್ಕೆ ಸಂವಾದಿಯಾಗಿರುವ ಯಾವುದೇ ಕಾನೂನು ಆ ರಾಜ್ಯದಲ್ಲಿ ಜಾರಿಯಲ್ಲಿದ್ದರೆ, ಆ ಸಂವಾದಿಯಾದ ಕಾನೂನು ನಿರಸಿತವಾಗಿರತಕ್ಕದ್ದು:

ಪರಂತು, ಅಂಥ ನಿರಸನವು ಆ ಸಂವಾದಿ ಕಾನೂನಿನ ಪೂರ್ವ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ, ಮತ್ತು ಅದಕ್ಕೆ ಒಳಪಟ್ಟು ಸಂವಾದಿ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಮಾಡಲಾದ ಅಥವಾ ಕೈಕೊಳ್ಳಲಾದ ಯಾವುದೇ ಕಾರ್ಯವನ್ನು ಅಥವಾ ಕೈಕೊಂಡ ಯಾವುದೇ ಕ್ರಮವನ್ನು ಅಂಥ ಕಾರ್ಯವನ್ನು ಮಾಡಿದ ಅಥವಾ ಕ್ರಮವನ್ನು ಕೈಕೊಂಡ ದಿನಾಂಕದಂದು ಈ ಅಧಿನಿಯಮವು ಜಾರಿಯಲ್ಲಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಲಾಗಿದೆ ಅಥವಾ ಕೈಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

70. ತೊಂದರೆಗಳ ನಿವಾರಣೆ.—ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯುಂಟಾದರೆ, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ, ಹಾಗೂ ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದ, ಉಪಬಂಧಗಳನ್ನು ರಚಿಸಬಹುದು.

## ಅನುಸೂಚಿ

[9 (1ಕ) ಪ್ರಕರಣವನ್ನು ನೋಡಿ]

### ತಿದ್ದುಪಡಿಗಳ ಪಟ್ಟಿ

1. 5ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ವಕ್ಫ್‌ಗಳ ಪಟ್ಟಿಯನ್ನು" ಎಂಬ ಪದಗಳಿಗೆ ಬದಲಾಗಿ ''ಸುನ್ನಿ ವಕ್ಫ್‌ಗಳ ಅಥವಾ ಸಂದರ್ಭಾನುಸಾರ, ಷಿಯಾ ವಕ್ಫ್‌ಗಳ ಪಟ್ಟಿಯನ್ನು'' ಎಂಬ ಪದಗಳನ್ನು ಸೇರಿಸತಕ್ಕದ್ದು,

2. 11ನೇ ಪ್ರಕರಣದಲ್ಲಿ,—

(ಕ) 'ಖ' ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:—

"(ಖ) ಮುಸ್ಲಿಂ ಕಾನೂನಿನ ಜ್ಞಾನವಿರುವ ಮತ್ತು ಸುನ್ನಿ ವಕ್ಫ್‌ಗಳ ಮಂಡಲಿಯ ಸಂದರ್ಭದಲ್ಲಿ ರಾಜ್ಯದ ಜಮಾಯಿತ್ ಅಲ್ ಉಲ್ಮಾ-ಇ-ಹಿಂದ್ ಅಂಥ ಸಂಘಗಳನ್ನು (ಅಂಥ ವ್ಯಕ್ತಿಗಳು ಹನಫಿ ಆಗಿರಲಿ, ಅಹಾಲೀಹದಿಗಳಾಗಿರಲಿ ಅಥವಾ ಷಫಾಯಿಗಳಾಗಿರಲಿ) ಮತ್ತು ಷಿಯಾ ವಕ್ಫ್‌ಗಳ ಮಂಡಲಿಯ ಸಂದರ್ಭದಲ್ಲಿ, ರಾಜ್ಯ ಷಿಯಾ ಸಮ್ಮೇಳನಗಳಂಥ ಸಂಘಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು,"

(ಖ) 2ನೇ ಪರಂತುಕವನ್ನು ಲೋಪಿಸತಕ್ಕದ್ದು ;

3. 15ನೇ ಪ್ರಕರಣದ (2)ನೇ ಉಪಪ್ರಕರಣದ (ಐ) ಖಂಡದಲ್ಲಿ, ವಿವರಣೆಯನ್ನು ಲೋಪಿಸತಕ್ಕದ್ದು.

4. 27ನೇ ಪ್ರಕರಣಕ್ಕೆ ಬದಲಾಗಿ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ.—

''27. ಯಾವುದೇ ಸ್ವತ್ತು, ವಕ್ಫ್ ಸ್ವತ್ತಾಗಿದೆಯೋ ಎಂಬ ಬಗ್ಗೆ ತೀರ್ಮಾನ.—(1) ಯಾವ ಸ್ವತ್ತು ವಕ್ಫ್ ಸ್ವತ್ತೆಂದು ನಂಬಲು ತನಗೆ ಕಾರಣವಿದೆಯೋ ಆ ಸ್ವತ್ತಿನ ಬಗ್ಗೆ ಮಾಹಿತಿಯನ್ನು, ಮಂಡಲಿಯು ತಾನೇ ಸಂಗ್ರಹಿಸಬಹುದು ಮತ್ತು ಒಂದು ನಿರ್ದಿಷ್ಟ ಸ್ವತ್ತು ವಕ್ಫ್ ಸ್ವತ್ತೇ ಅಲ್ಲವೇ ಎಂಬ ಬಗ್ಗೆ ಅಥವಾ ಒಂದು ವಕ್ಫ್ ಸುನ್ನಿ ವಕ್ಫೇ ಅಥವಾ ಷಿಯಾ ವಕ್ಫೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಪ್ರಶ್ನೆಯನ್ನು ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯಕ್ಕೆ ಅದು ಕಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ತನಗೆ ಕಳಿಸಲಾದ ಯಾವುದೇ ಪ್ರಶ್ನೆಯ ಮೇಲೆ ಸಿವಿಲ್ ನ್ಯಾಯಾಲಯವು ಮಾಡಿದ ತೀರ್ಮಾನವು ಅಂತಿಮವಾಗಿರತಕ್ಕದ್ದು."